◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

तेज़ | सटीक | निष्पक्ष | जनहित में | सच की आवाज़ | जन-जन की आवाज़ | निडर पत्रकारिता

ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಆರಂಭ - ಮಾಸಿಕ 15,000 ರೂ. ಗೌರವಧನ ಸೇರಿದಂತೆ ಪ್ರಮುಖ ಬೇಡಿಕೆ ಈಡೇರಿಸಲು ಆಗ್ರಹ - ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ - ಸಿದ್ದರಾಮಯ್ಯ ತಪ್ಪಿದ ಮಾತನ್ನು ಡಿಕೆಶಿ ಈಡೇರಿಸಲಿ - ಅಲ್ಲಮಪ್ರಭು ಬೆಟ್ಟದೂರು



ಆಶಾ ಕಾರ್ಯಕರ್ತೆಯರ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಆರಂಭ

ಬೆಂಗಳೂರು: ಮಾಸಿಕ 15,000 ರೂ. ಗೌರವಧನ ಸೇರಿದಂತೆ ಪ್ರಮುಖ ಒತ್ತಾಯಗಳನ್ನು ಈಡೇರಿಸಲು ಆಗ್ರಹಿಸಿ ಇಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಆಶಾ ಕಾರ್ಯಕರ್ತೆಯರ ಬೃಹತ್ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ಆರಂಭವಾಯಿತು.

ಪ್ರತಿಭಟನೆ ಉದ್ದೇಶಿಸಿ ಹಿರಿಯ ಸಾಹಿತಿಗಳು ಹಾಗೂ ಹೋರಾಟಗಾರರಾದ ಅಲ್ಲಮಪ್ರಭು ಬೆಟ್ಟದೂರು ಮಾತನಾಡಿ, ಬೆಲೆ ಏರಿಕೆಯಿಂದ ಜನಜೀವನ ದುಸ್ತರವಾಗಿದೆ. ಬೇರೆ ರಾಜ್ಯಗಳಲ್ಲಿ ಆಶಾಗಳಿಗೆ ಹೆಚ್ಚಿನ ಗೌರವಧನ ನೀಡಲಾಗುತ್ತಿದೆ. ಕರ್ನಾಟಕದ ಆಶಾಗಳಿಗೆ ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ 10,000 ರೂ. ವೇತನದ ಭರವಸೆ ನೀಡಿ, ಅದನ್ನು ಈಡೇರಿಸದಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ಮುಂದುವರೆದು ಮಾತನಾಡಿದ ಅವರು, ಮಹಿಳೆಯರು ಮನೆ ತೊರೆದು ಆಶಾಗಳಾಗಿ ಸಮಾಜದ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಆಶಾಗಳ ಬೇಡಿಕೆ ಈಡೇರಿಸಿ, ಮಹಿಳೆಯರ ಶ್ರಮಕ್ಕೆ ತಕ್ಕ ಗೌರವ ನೀಡಬೇಕು. ನಮ್ಮ ಹೊಲದಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ 10,000 ರೂ. ಕೊಡುತ್ತಿದ್ದೇವೆ. ಒಬ್ಬ ವ್ಯಕ್ತಿ ಈ ಸಂಬಳ ಕೊಡಲು ಸಾಧ್ಯವಿರುವಾಗ ಸರ್ಕಾರಕ್ಕೆ ಏಕೆ ಸಾಧ್ಯವಿಲ್ಲ. ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತನ್ನು ಇಂದಿನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡೆಸಿಕೊಡಬೇಕು ಎಂದು ಆಗ್ರಹಿಸಿದರು.

ಇಂದಿನ ಪ್ರತಿಭಟನೆಯ ಅಧ್ಯಕ್ಷತೆಯನ್ನು ವಹಿಸಿದ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಅಧ್ಯಕ್ಷರಾದ ಕೆ. ಸೋಮಶೇಖರ್ ಯಾದಗಿರಿ ಮಾತನಾಡಿ, ಇಂದು ರಾಜ್ಯ ಸರ್ಕಾರವು ಆಶಾ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಿಸುವ ಬದಲು ಅವರನ್ನು ಮನೆಗೆ ಕಳಿಸುವ ಹುನ್ನಾರ ನಡೆಸಿದೆ. ಅವಿವೇಕಿ ಸರ್ಕಾರವು ಸಾವಿರಾರು ಆಶಾ ಕಾರ್ಯಕರ್ತೆಯರು ಮತ್ತು ಸುಗಮಕಾರರ ಕೆಲಸ ಕಿತ್ತುಕೊಳ್ಳಲು ಹೊಂಚು ಹಾಕಿದೆ. ಇದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು. ರಾಜ್ಯ ಸರ್ಕಾರ 15,000 ರೂ. ನಿಗದಿ ಪಡಿಸಿಲ್ಲ. ಕೇಂದ್ರದ ಬಿಜೆಪಿ ಸರ್ಕಾರವು 1,500 ರೂ. ಹೆಚ್ಚಿಸುವ ಘೋಷಣೆ ಮಾಡಿತ್ತು. ಅದನ್ನು ಕೂಡ ಈಡೇರಿಸಿಲ್ಲ. ಕೇಂದ್ರದ ಬಿಜೆಪಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರ ಎರಡೂ ಕೂಡ ಒಂದೇ. ಈ ಸ್ಪಷ್ಟತೆಯೊಂದಿಗೆ ನಮ್ಮ ಚಳುವಳಿ ಮುನ್ನಡೆಯಬೇಕು ಎಂದು ಕರೆ ನೀಡಿದರು.

ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಲತಾ ಮೈಸೂರು ಮಾತನಾಡಿ, ಸತ್ಯಹರಿಶ್ಚಂದ್ರರ ನೆಲದಲ್ಲಿ ಹೆಜ್ಜೆ ಹೆಜ್ಜೆಗೂ ಸುಳ್ಳಾಡುವ ಸರ್ಕಾರವು ನಮ್ಮನ್ನಾಳುತ್ತಿರುವುದು ನಾಚಿಕೆಗೇಡಿನ ಸಂಗತಿ. ಇಂದು ಆಶಾಗಳಿಗೆ ನೀಡುವ 5,000 ರೂ. ಮಾಸಿಕ ಗೌರವಧನವು ಸರ್ಕಾರಿ ಅಧಿಕಾರಿಗಳ ಒಂದು ಹೊತ್ತಿನ ಟೀ, ಬಿಸ್ಕೆಟ್‌ಗೆ ಸಲ್ಲುವ ವೆಚ್ಚಕ್ಕಿಂತ ಕಡಿಮೆ ಇದೆ. ಸರ್ಕಾರಿ ಮೇಲಧಿಕಾರಿಗಳಿಗೆ ಗರಿಷ್ಠ ವೇತನ ನೀಡುವ ಸರ್ಕಾರಗಳು, ಆಶಾಗಳಿಗೆ ಕನಿಷ್ಠ ವೇತನವನ್ನು ನೀಡದೇ ಇರುವುದೇ ಅನ್ಯಾಯ. ಇಂದು ಬಿಡಿಬಿಡಿಯಾಗಿದ್ದ ಆಶಾಗಳು ಒಗ್ಗಟ್ಟಾಗಿ ಒಂದಾಗಿದ್ದಾರೆ. ಈ ಒಗ್ಗಟ್ಟಿನ ಹೋರಾಟ ಯಶಸ್ವಿಯಾಗಲಿ ಎಂದು ಹಾರೈಸಿದರು.

ಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ ಮಾತನಾಡಿ, ಆತಂಕ ಮತ್ತು ಆವೇಶವನ್ನು ಹೊತ್ತು ಆಶಾ ಕಾರ್ಯಕರ್ತೆಯರು ಹೋರಾಟಕ್ಕೆ ಬಂದಿದ್ದೀರಿ. ನೀವು ಕೇಳುತ್ತಿರುವ 15,000 ರೂ. ಗೌರವಧನ ದೊಡ್ಡ ಮೊತ್ತವಲ್ಲ. ಹಣ್ಣಿನ ಅಂಗಡಿಯಲ್ಲಿ ಕೆಲಸ ಮಾಡುವವರಿಗೆ, ಡಿ-ಮಾರ್ಟ್‌ನಲ್ಲಿರುವ ಸೇಲ್ಸ್‌ಮನ್‌ಗಳಿಗೆ ಈಗ ಸರ್ಕಾರ ನಿಮಗೆ ನೀಡುತ್ತಿರುವ 5,000 ರೂ. ಗಿಂತ ಹೆಚ್ಚಿನ ಸಂಬಳವಿದೆ. ನಮ್ಮ ಹಳ್ಳಿಗಳಲ್ಲಿ ಕೂಸಿರುವ ಮನೆಗೆಲ್ಲಾ ಆಶಾ ಕಾರ್ಯಕರ್ತೆಯರು ಪರಿಚಿತರೇ ಹೊರತು, ಯಾವ ಡಿಸಿ ಅಥವಾ ತಹಶೀಲ್ದಾರರೂ ಜನರಿಗೆ ಪರಿಚಯವಿಲ್ಲ. ನೀವು ಹೋಗಿ ಸೇವೆ ಸಲ್ಲಿಸುವ ಮನೆಗಳಿಗೆಲ್ಲಾ ನಿಮ್ಮ ನೋವಿನ ಕೂಗು ಮುಟ್ಟಬೇಕು. ಇಡೀ ಜನಸಮುದಾಯವೇ ನಿಮ್ಮೊಂದಿಗೆ ನಿಂತು ಹೋರಾಡಬೇಕು. ಇಂದು ಮಾತಿಗೆ ತಪ್ಪುವುದು ಸರ್ಕಾರದ ಹವ್ಯಾಸವಾಗಿದೆ. ಈ ಕೂಡಲೇ 15,000 ರೂ. ಗೌರವಧನ ನಿಗದಿಯಾಗಬೇಕು ಮತ್ತು ಪ್ರತಿ ವರ್ಷ ಬೆಲೆ ಏರಿಕೆಗೆ ಅನುಗುಣವಾಗಿ ಇಂತಿಷ್ಟು ಶೇಕಡಾ ಗೌರವಧನವನ್ನು ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಡಿ. ನಾಗಲಕ್ಷ್ಮಿ ಪ್ರಸ್ತಾವಿಕವಾಗಿ ಮಾತನಾಡಿ, ಇಂದು ಸರ್ಕಾರ ಪದೇ ಪದೇ ಆಶಾಗಳನ್ನು ಬೀದಿಗೆ ತಳ್ಳುತ್ತಿರುವ ಕಾರಣ ಆಶಾಗಳಿಗೆ ಹೋರಾಟ ಅನಿವಾರ್ಯವಾಗಿದೆ. ರಾಜ್ಯದಲ್ಲಿ ಕಳೆದ 18 ವರ್ಷಗಳಿಂದ ಹಳ್ಳಿಗಾಡಿನ ಪ್ರದೇಶದಲ್ಲಿ, ನಗರದ ಕೊಳಚೆ ಪ್ರದೇಶಗಳಲ್ಲಿ ಹಗಲು ರಾತ್ರಿ ದುಡಿಯುವ ಆಶಾಗಳಿಗೆ ಇಂದು ದುಡಿಮೆಗೆ ತಕ್ಕ ಪ್ರತಿಫಲವಿಲ್ಲ. ಕಳೆದ ಬಾರಿ ಜನವರಿ 2025ರಲ್ಲಿ ಸರ್ಕಾರವು 10,000 ರೂ. ನಿಗದಿ ಮಾಡುತ್ತೇವೆ ಎಂದ ಮಾತಿಗೆ ಬೆಲೆ ಕೊಟ್ಟು ಆಶಾಗಳು ಹೋರಾಟವನ್ನು ಹಿಂತೆಗೆದುಕೊಂಡಿದ್ದರು. ಆದರೆ ಇಂದಿಗೂ ಇದು ಆಶ್ವಾಸನೆಯಾಗಿಯೇ ಉಳಿದಿದೆ. ನಮ್ಮ ನೆರೆಯ ರಾಜ್ಯಗಳಾದ ಕೇರಳ, ಆಂಧ್ರಪ್ರದೇಶ, ತೆಲಂಗಾಣಗಳಲ್ಲಿ 10,000 ರೂ. ಹಾಗೂ 12,000 ರೂ. ಮಾಸಿಕ ವೇತನ ನಿಗದಿಪಡಿಸುವುದಾದರೆ ನಮ್ಮ ರಾಜ್ಯದ ಆಶಾಗಳಿಗೇಕಿಲ್ಲ. ದುಡಿಯುವ ಹೆಣ್ಣುಮಕ್ಕಳಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದ ಸರ್ಕಾರ ನುಡಿದಂತೆ ನಡೆಯುವ ಸರ್ಕಾರವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗುಲ್ಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಕಾಶೀನಾಥ್ ಅಂಬಲಗಿ, ಪ್ರಗತಿಪರ ಹೋರಾಟಗಾರರಾದ ಉಗ್ರ ನರಸಿಂಹೇಗೌಡ, ಉಚ್ಚನ್ಯಾಯಾಲಯದ ಹಿರಿಯ ವಕೀಲರಾದ ಖಿಸಾರ್, ಮೆಡಿಕಲ್ ಸರ್ವಿಸ್ ಸೆಂಟರ್ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಸುಧಾ ಕಾಮತ್, ಎಐಎಂಎಸ್‌ಎಸ್ ರಾಜ್ಯ ಉಪಾಧ್ಯಕ್ಷರಾದ ಆರ್. ಗೀತಾ ಮೊದಲಾದವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು. ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕೆ. ಸೋಮಶೇಖರ್, ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ, ಆಶಾ ಸಂಘದ ರಾಜ್ಯ ಮುಖಂಡರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಹೋರಾಟಕ್ಕೆ ರಾಜ್ಯದ ನೂರಾರು ಗಣ್ಯರು ಬೆಂಬಲ ಸೂಚಿಸಿದ್ದಾರೆ. ಅನೇಕ ಸಾಮಾಜಿಕ ಹೋರಾಟಗಾರರು, ಸಾಹಿತಿಗಳು ಮತ್ತು ಬುದ್ಧಿಜೀವಿಗಳು ಸ್ವತಃ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದು, ಆಶಾ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಆಗ್ರಹಿಸುತ್ತಿದ್ದಾರೆ.

ಸಂಘದ ಪ್ರಮುಖ ಬೇಡಿಕೆಗಳು:

1. 15,000 ರೂ. ನಿಶ್ಚಿತ ಮಾಸಿಕ ಗೌರವಧನ: ವಿವಿಧ ರಾಜ್ಯಗಳಲ್ಲಿ ಹೆಚ್ಚಿಸಿರುವಂತೆ, ಕರ್ನಾಟಕ ರಾಜ್ಯ ಸರ್ಕಾರದಿಂದ ಆಶಾ ಕಾರ್ಯಕರ್ತೆಯರಿಗೆ ಮಾಸಿಕ 15,000 ರೂ. ಗೌರವಧನ ನಿಗದಿಯಾಗಬೇಕು.

2. ಒತ್ತಾಯದ ಮೊಬೈಲ್ ಕೆಲಸ ಕೈಬಿಡಿ: ಎಲ್ಲಾ ಆ್ಯಪ್‌ಗಳ ಮೂಲಕ ಮೊಬೈಲ್ ಕೆಲಸಗಳನ್ನು ಒತ್ತಾಯಪೂರ್ವಕವಾಗಿ ಮಾಡಿಸಿಕೊಳ್ಳುವುದನ್ನು ಕೈಬಿಡಬೇಕು, ಅಥವಾ ಮೊಬೈಲ್ ಕೆಲಸಗಳಿಗೆ ಮೊಬೈಲ್ ಒದಗಿಸಿ ಪ್ರೋತ್ಸಾಹಧನ ನಿಗದಿ ಮಾಡಬೇಕು. ಮೊಬೈಲ್ ಕೆಲಸ ಮಾಡಲು ಸಾಧ್ಯವಾಗದವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು.

3. ನಿವೃತ್ತರಿಗೆ ಇಡಿಗಂಟು: ಕಳೆದ ಹಲವಾರು ವರ್ಷಗಳಿಂದ ನಿವೃತ್ತಿಯಾಗಿರುವ ಆಶಾ ಕಾರ್ಯಕರ್ತೆಯರಿಗೆ ನಿಯಮಾನುಸಾರ ರಾಜ್ಯದಾದ್ಯಂತ ಆಶಾ ನಿಧಿ ಮೂಲಕ ಕೇಂದ್ರದ ಪ್ರೋತ್ಸಾಹಧನವು ಆಶಾ ಕಾರ್ಯಕರ್ತೆಯರು ಮಾಡಿದ ಕೆಲಸಕ್ಕೆ ತಕ್ಕಷ್ಟು ಬರುತ್ತಿಲ್ಲ. ಆಶಾ ಕಾರ್ಯಕರ್ತೆಯರಿಗೆ ಕೂಡಲೇ ಬಾಕಿ ಇರುವ ಪ್ರೋತ್ಸಾಹಧನ ನೀಡಬೇಕು.

5. ಆಶಾ ಸುಗಮಕಾರರ ಮುಂದುವರಿಕೆ ಮತ್ತು 1,500 ರೂ. ಬಾಕಿ: ಮಾರ್ಗಸೂಚಿಗೆ ವಿರುದ್ಧವಾಗಿ ಸುಗಮಕಾರರ ಸೇವೆಯನ್ನು 25-02-2025 ರಂದು ಹಿಂಪಡೆಯಲಾಗಿದ್ದು, ನಿಯಮಾನುಸಾರ ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರಿಸಬೇಕು. ಆರ್‌ಒಪಿಯಲ್ಲಿ ಅನುಮೋದನೆಯಾದಂತೆ 2024-25ನೇ ಸಾಲಿನಲ್ಲಿ ಹೆಚ್ಚಳವಾದ ಮಾಸಿಕ 1,500 ರೂ. ರಂತೆ ಒಂದು ವರ್ಷದ ಬಾಕಿ ಹಣ ನೀಡಬೇಕು.

6. ಎನ್‌ಐಒಎಸ್ ತರಬೇತಿಗೆ ವಿಶೇಷ ಪ್ರೋತ್ಸಾಹಧನ: ಕೇಂದ್ರದ ನಿರ್ದೇಶನದಂತೆ, ರಾಜ್ಯದಲ್ಲಿ ಬಾಕಿ ಇರುವ ಎನ್‌ಐಒಎಸ್ ತರಬೇತಿ ಪೂರ್ಣಗೊಳಿಸಿದ ಆಶಾ ಮತ್ತು ಆಶಾ ಸುಗಮಕಾರರಿಗೆ ಒಂದು ತರಬೇತಿಗೆ 5,000 ರೂ. ರಂತೆ ವಿಶೇಷ ಪ್ರೋತ್ಸಾಹಧನವನ್ನು ಕೂಡಲೇ ನೀಡಬೇಕು.

7. ತೀವ್ರ ಅನಾರೋಗ್ಯದ ಅವಧಿಯಲ್ಲಿ ಭದ್ರತೆ: ತೀವ್ರ ರೋಗದ ಚಿಕಿತ್ಸೆ ಪಡೆಯುವ ಅವಧಿಯಲ್ಲಿ ಕನಿಷ್ಠ 3 ತಿಂಗಳುಗಳ ಕಾಲ ರಾಜ್ಯ ಸರ್ಕಾರದ ನಿಶ್ಚಿತ ಗೌರವಧನ ಮತ್ತು ದೈನಂದಿನ ಚಟುವಟಿಕೆಗಳ ನಿಗದಿತ ಪ್ರೋತ್ಸಾಹಧನ ನೀಡಬೇಕು.

8. ನಿವೃತ್ತಿ ಸೌಲಭ್ಯ 5 ಲಕ್ಷ ರೂ.: ಸೇವಾ ನಿವೃತ್ತಿ ಪಡೆಯುವ ಕಾರ್ಯಕರ್ತೆಯರಿಗೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇರುವಂತೆ ನಿವೃತ್ತಿ ಸೌಲಭ್ಯವನ್ನು 5 ಲಕ್ಷ ರೂ. ಗೆ ಹೆಚ್ಚಿಸಬೇಕು.

ಈ ಹಕ್ಕೊತ್ತಾಯಗಳನ್ನು ಈಡೇರಿಸುವವರೆಗೆ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರಿಸಲು ಆಶಾ ಕಾರ್ಯಕರ್ತೆಯರು ದೃಢವಾಗಿ ನಿರ್ಧರಿಸಿದ್ದಾರೆ.

— Ningappa

POLITICS

ಚನ್ನಗಿರಿ ತಾಲೂಕ್ ಸಂಯುಕ್ತ ಜನತಾದಳದ ಕಾರ್ಯಕರ್ತರ ಸಭೆಯಲ್ಲಿ ರಾಜ್ಯಾಧ್ಯಕ್ಷರಾದ ಶ್ರೀಯುತ ಮಹಿಮ ಜೆ ಪಟೇಲ್ ಮತ್ತು ಶಿವಮೊಗ್ಗ ಜಿಲ್ಲಾಧ್ಯಕ್ಷರಾದ ಶ್ರೀಯುತ ದೇವರಾಜ ಶಿಂಧೆ ಮಾತನಾಡಿದ ಕ್ಷಣ



ಚನ್ನಗಿರಿ ತಾಲೂಕ್ ಸಂಯುಕ್ತ ಜನತಾದಳದ ಕಾರ್ಯಕರ್ತರ ಸಭೆಯಲ್ಲಿ ರಾಜ್ಯಾಧ್ಯಕ್ಷರಾದ ಶ್ರೀಯುತ ಮಹಿಮ ಜೆ ಪಟೇಲ್ ಮತ್ತು ಶಿವಮೊಗ್ಗ ಜಿಲ್ಲಾಧ್ಯಕ್ಷರಾದ ಶ್ರೀಯುತ ದೇವರಾಜ ಶಿಂಧೆ ಮಾತನಾಡಿದ ಕ್ಷಣ

— ಕೆ ಆರ್ ಸುರೇಶ್

ಅವಧಿಯಲ್ಲಿ ಶಿಕ್ಷಕರು ಇಲ್ಲದೇ ವಿದ್ಯಾರ್ಥಿಗೆ ಬೈಕ್ ಅಪಘಾತ, ಕಾಲು ಮುರಿತ - ಇಬ್ಬರು ಶಿಕ್ಷಕರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ ಲಿಂಗಸಗೂರು BEO - 3 ದಿನಗಳಲ್ಲಿ ಲಿಖಿತ ಸಮಜಾಯಿಷಿಗೆ ಸೂಚನೆ



ಲಿಂಗಸಗೂರು: ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಲಿಂಗಸಗೂರು ವತಿಯಿಂದ ದಿನಾಂಕ 12.11.2026 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಈಚನಾಳ ಶಾಲೆಯ ಸಹ ಶಿಕ್ಷಕ ಶ್ರೀ ಕುಮಾರಸ್ವಾಮಿ ಮತ್ತು ದೈಹಿಕ ಶಿಕ್ಷಕ ಶ್ರೀ ನಾರಾಯಣಪ್ಪ ಅವರಿಗೆ ಶಾಲಾ ಅವಧಿಯಲ್ಲಿ ಶಾಲೆಯಲ್ಲಿ ಇಲ್ಲದೇ ಇರುವುದರಿಂದ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ.

ಈಚನಾಳ ಗ್ರಾಮದ ಗ್ರಾಮಸ್ಥರ ಮೌಖಿಕ ದೂರು ದಿನಾಂಕ 11.11.2026 ರಂತೆ, ದಿನಾಂಕ 11.11.2026 ರಂದು ಮಧ್ಯಾಹ್ನದ ಶಾಲಾ ಅವಧಿಯಲ್ಲಿ ಶಾಲೆಯಲ್ಲಿ ಇಲ್ಲದೇ ಇರುವುದರಿಂದ ಅಂದು ಸದರಿ ಶಾಲೆಯಲ್ಲಿ ಕಲಿಯುತ್ತಿರುವ ಒಬ್ಬ ವಿದ್ಯಾರ್ಥಿಯು ಶಾಲೆಯಿಂದ ಹೊರಗೆ ಹೋಗಿದ್ದು, ಆ ಸಂದರ್ಭದಲ್ಲಿ ಬೈಕ್ ಅಪಘಾತವಾಗಿ ವಿದ್ಯಾರ್ಥಿಯ ಕಾಲು ಮುರಿದಿರುತ್ತದೆ. ಈ ಘಟನೆಗೆ ಪ್ರಮುಖ ಕಾರಣ ಶಿಕ್ಷಕರುಗಳು ಶಾಲೆಯಲ್ಲಿ ಇಲ್ಲದೇ ಇರುವುದು ಎಂದು ಈಚನಾಳ ಗ್ರಾಮದ ಗ್ರಾಮಸ್ಥರು ದೂರು ನೀಡಿ ಸದರಿ ಶಿಕ್ಷಕರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದಾರೆ.

ಶಾಲಾ ಅವಧಿಯಲ್ಲಿ ನೀವುಗಳು ಶಾಲೆಯಲ್ಲಿ ಹಾಜರಿಲ್ಲದ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಯು ಶಾಲೆಯಿಂದ ಹೊರಗಡೆ ಬಂದಿದ್ದು, ಈ ಸಂದರ್ಭದಲ್ಲಿ ಬೈಕ್ ಅಪಘಾತ ಸಂಭವಿಸಿದ್ದು, ವಿದ್ಯಾರ್ಥಿಯ ಕಾಲು ಮುರಿದಿರುತ್ತದೆ. ಇದಕ್ಕೆ ನಿಮ್ಮ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿಯೇ ಕಾರಣವಾಗಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಶಾಲಾ ಮಕ್ಕಳ ಸುರಕ್ಷತೆ ಹಾಗೂ ರಕ್ಷಣೆಯ ಜವಾಬ್ದಾರಿ ಶಾಲೆಯಲ್ಲಿ ಕರ್ತವ್ಯ ನಿರತ ಶಿಕ್ಷಕರ ಮೇಲಿರುತ್ತದೆ. ವಿದ್ಯಾರ್ಥಿಗಳು ಶಾಲಾ ಅವಧಿಯಲ್ಲಿ ಅನಧಿಕೃತವಾಗಿ ಶಾಲೆಯಿಂದ ಹೊರಹೋಗದಂತೆ ಸೂಕ್ತ ಮುನ್ನೆಚ್ಚರಿಕೆ ವಹಿಸುವುದು ಹಾಗೂ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಸಹ ತಮ್ಮ ಕರ್ತವ್ಯವಾಗಿರುತ್ತದೆ.

ಘಟನೆ ನಡೆದು ಎರಡು ಮೂರು ತಾಸು ಗತಿಸಿದ್ದರೂ ಮೇಲಾಧಿಕಾರಿಗಳಿಗೆ ವಿಷಯ ತಿಳಿಸದಿರುವುದು ವಿಷಾದದ ಸಂಗತಿಯಾಗಿದೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

ಆದ್ದರಿಂದ ಸದರಿ ಘಟನೆಗೆ ಸಂಬಂಧಿಸಿದಂತೆ ತಾವು ಶಾಲೆಯಲ್ಲಿ ಹಾಜರಿಲ್ಲದಿರಲು ಕಾರಣವೇನು, ವಿದ್ಯಾರ್ಥಿಯು ಶಾಲೆಯಿಂದ ಹೊರಗಡೆ ಹೋಗಿರುವುದನ್ನು ತಡೆಯಲು ಏಕೆ ಕ್ರಮ ಕೈಗೊಂಡಿಲ್ಲ, ಹಾಗೂ ಈ ಘಟನೆಗೆ ಸಂಬಂಧಿಸಿದಂತೆ ತಮ್ಮ ಕರ್ತವ್ಯ ಲೋಪಕ್ಕೆ ಕಾರಣವೇನು ಎಂಬುದರ ಕುರಿತು ಈ ನೋಟಿಸ್ ತಲುಪಿದ ದಿನಾಂಕದಿಂದ 03 ದಿನಗಳ ಒಳಗಾಗಿ ಸೂಕ್ತ ದಾಖಲೆಗಳೊಂದಿಗೆ ಲಿಖಿತ ಸಮಜಾಯಿಷಿಯನ್ನು ಈ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ನಿಗದಿತ ಅವಧಿಯೊಳಗೆ ಸಮಜಾಯಿಷಿ ಸಲ್ಲಿಸದಿದ್ದಲ್ಲಿ, ಈ ಬಗ್ಗೆ ನೀವು ಹೇಳುವುದು ಏನೂ ಇಲ್ಲವೆಂದು ಪರಿಗಣಿಸಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ನೋಟಿಸ್‌ನಲ್ಲಿ ಎಚ್ಚರಿಕೆ ನೀಡಲಾಗಿದೆ.

— Ningappa

ಯಶಸ್ವಿ - ಸಿಂಧನೂರಿನಲ್ಲಿ ಸಿಪಿಐ(ಎಂಎಲ್) ರೆಡ್ ಸ್ಟಾರ್ ಜಿಲ್ಲಾ ಸಮಿತಿ ಸಭೆ - ಸಂಘಟನಾ ಬಲವರ್ಧನೆ, ಮುಂದಿನ ಹೋರಾಟಗಳ ಬಗ್ಗೆ ಮಹತ್ವದ ನಿರ್ಣಯ



ರಾಯಚೂರು ಜಿಲ್ಲಾ ಸಮಿತಿ ಸಭೆ ಯಶಸ್ವಿ

ಸಿಂಧನೂರು: ಸಿಪಿಐ(ಎಂಎಲ್) ರೆಡ್ ಸ್ಟಾರ್ ಪಕ್ಷದ ರಾಜ್ಯ ಸಮಿತಿ ನಿರ್ಣಯದಂತೆ ಇಂದು 17.11.2026 ಸಿಂಧನೂರಿನಲ್ಲಿ ರಾಯಚೂರು ಜಿಲ್ಲಾ ಸಮಿತಿ ಸಭೆಯು ಕೋರಂನೊಂದಿಗೆ ಕಾಮ್ರೇಡ್ ಆದೇಶ ನಗನೂರು ಅವರ ಅಧ್ಯಕ್ಷತೆಯಲ್ಲಿ, ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಎಂ. ಗಂಗಾಧರ್ ಅವರ ಉಪಸ್ಥಿತಿಯಲ್ಲಿ ಯಶಸ್ವಿಯಾಗಿ ಜರುಗಿತು.

ಸಭೆಯಲ್ಲಿ ಪ್ರಮುಖ ಅಜೆಂಡಾಗಳ ಕುರಿತು ಸುದೀರ್ಘ ಚರ್ಚೆ ನಡೆಸಿ, ಸಂಘಟನಾ ಬಲವರ್ಧನೆ ಹಾಗೂ ಮುಂದಿನ ಹೋರಾಟಗಳ ಕುರಿತು ಮಹತ್ವದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ದಲಿತರು, ರೈತರು, ಕಾರ್ಮಿಕರು, ವಿದ್ಯಾರ್ಥಿ-ಯುವಜನರು ಹಾಗೂ ಮಹಿಳೆಯರ ನಡುವೆ

ಹಂಪನಗೌಡ ಬಾದರ್ಲಿ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಗೌರವ್ ಗುಪ್ತ, ನೀರಾವರಿ ಇಲಾಖೆಯ ಕಾರ್ಯದರ್ಶಿ ಶ್ರೀ ಸತ್ಯನಾರಾಯಣ, ಕೆಎನ್‌ಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಶ್ರೀ ಬಿ.ಎಸ್. ರಾಠೋಡ್ ಸೇರಿದಂತೆ ನೀರಾವರಿ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

— Ningappa

ಹೊರಗುತ್ತಿಗೆ ನೌಕರರ ಬಾಕಿ ವೇತನ ಮತ್ತು PF ESI ಪಾವತಿಗಾಗಿ ರಾಯಚೂರಿನಲ್ಲಿ ಧರಣಿ - ಜಿಲ್ಲಾ ಆರೋಗ್ಯ ಅಧಿಕಾರಿಗಳ ಲಿಖಿತ ಭರವಸೆ - ಹೋರಾಟ ತಾತ್ಕಾಲಿಕವಾಗಿ ಮುಂದೂಡಿಕೆ - ನ.20 ರೊಳಗೆ ಪಾವತಿಗೆ ಗುತ್ತಿಗೆದಾರರ ಒಪ್ಪಿಗೆ



ಹೊರಗುತ್ತಿಗೆ ನೌಕರರ ಬಾಕಿ ವೇತನ ಮತ್ತು PF ESI ಪಾವತಿಗಾಗಿ ರಾಯಚೂರಿನಲ್ಲಿ ಧರಣಿ - ಜಿಲ್ಲಾ ಆರೋಗ್ಯ ಅಧಿಕಾರಿಗಳ ಲಿಖಿತ ಭರವಸೆ

ರರಾಯಚೂರು: ಜಿಲ್ಲೆಯ ಆರೋಗ್ಯ ಇಲಾಖೆಯ ಪ್ರಾಥಮಿಕ / ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಆಸ್ಪತ್ರೆಗಳಲ್ಲಿ ನೂರಾರು ಜನ ಸಿ ಮತ್ತು ಡಿ ಗ್ರೂಪ್ ಹೊರಗುತ್ತಿಗೆ ನೌಕರರು ಹಗಲಿರುಳು ದುಡಿಯುತ್ತಿದ್ದರೂ, ಅವರಿಗೆ ಬರಬೇಕಾದ ಬಾಕಿ ವೇತನವನ್ನು ಪಾವತಿಸದೆ ಗುತ್ತಿಗೆ ಏಜೆನ್ಸಿಗಳು ಮತ್ತು ಅಧಿಕಾರಿಗಳು ಸತತವಾಗಿ ಅನ್ಯಾಯವೆಸಗುತ್ತಿದ್ದಾರೆ ಎಂದು ಆರೋಪಿಸಿ, ರಾಯಚೂರು ಜಿಲ್ಲಾ ಆರೋಗ್ಯ ಇಲಾಖೆ ಸಿ ಮತ್ತು ಡಿ ಗ್ರೂಪ್ ಹೊರಗುತ್ತಿಗೆ ನೌಕರರ ಸಂಘ TUCI ವತಿಯಿಂದ ಇಂದು 16-11-2026 ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರಿನಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಪ್ರತಿಭಟನೆ ಶುರು ಮಾಡಲಾಯಿತು.

ಹೋರಾಟವನ್ನು ಉದ್ದೇಶಿಸಿ TUCI ಜಿಲ್ಲಾಧ್ಯಕ್ಷರು ಜಿ ಅಡವಿರಾವ್ ಅವರು ಮಾತನಾಡಿ, ಕಾರ್ಮಿಕರ ಬೆವರಿನ ಫಲವನ್ನು ಕಸಿದುಕೊಳ್ಳಲು ಬಿಡುವುದಿಲ್ಲ, ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಎಚ್ಚರಿಸಿದರು.

ನಂತರ ತುರ್ತು ಸಭೆಯನ್ನು ಕರೆದು 20 ನವೆಂಬರ್ 2026ರ ವರೆಗೆ ಎಲ್ಲಾ ಕಾರ್ಮಿಕರ ಬಾಕಿ ವೇತನ ಹಾಗೂ PF ESI ವೇತನ ಚೀಟಿಯ ಜೊತೆಗೆ ಪಾವತಿ ಮಾಡುತ್ತೇವೆಂದು M/s ಪಾಪುಲರ್ ಏಜೆನ್ಸಿ ಗುತ್ತಿಗೆದಾರರು ಕಾರ್ಮಿಕ ಸಂಘಟನೆ ಮತ್ತು ಜಿಲ್ಲಾ ವೈದ್ಯಾಧಿಕಾರಿಗಳ ಮುಂದೆ ಒಪ್ಪಿಕೊಂಡಿದ್ದಾರೆ.

ಈ ಸಭೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಪಂಚಾಯತ ಅಧಿಕಾರಿಗಳು ರಾಯಚೂರು, ಸಿಪಿಐ ಸದರಬಜಾರ್ ಠಾಣೆ, ಸಿಪಿಐ ಪಶ್ಚಿಮ ಪೊಲೀಸ್ ಠಾಣೆ, ಪಾಪುಲರ್ ಮತ್ತು ಸ್ವಿಸ್ ಏಜೆನ್ಸಿಗಳ ಗುತ್ತಿಗೆದಾರರು ಹಾಗೂ ಕಾರ್ಮಿಕ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ನಂತರ ಜಿಲ್ಲಾ ವೈದ್ಯಾಧಿಕಾರಿಗಳು ಧರಣಿ ಸ್ಥಳಕ್ಕೆ ಬಂದು ಸಭೆಯ ನಡುವಳಿಗಳಾದ 20ನೇ ನವೆಂಬರ್ 2026 ತಾರೀಕಿನ ವರೆಗೆ ಗುತ್ತಿಗೆದಾರರು ಬಾಕಿ ವೇತನ ಮತ್ತು PF ESI ಪಾವತಿಸುವಲ್ಲಿ ವಿಫಲರಾದರೆ ಅವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮ ಜರುಗಿಸಲಾಗುವುದೆಂದು ಲಿಖಿತ ಪತ್ರವನ್ನು ಕಾರ್ಮಿಕ ಮುಖಂಡರಿಗೆ ಸಲ್ಲಿಸಿದರು.

ನಂತರ ಕಾರ್ಮಿಕರೊಂದಿಗೆ ಕಾರ್ಮಿಕ ಸಂಘಟನೆ ಚರ್ಚೆ ನಡೆಸಿ ತಾತ್ಕಾಲಿಕವಾಗಿ ಧರಣಿಯನ್ನು ಹಿಂಪಡೆಯಲಾಯಿತು. ಒಂದು ವೇಳೆ ದಿನಾಂಕ 20/11/2026ರ ವರೆಗೆ ನೀಡಿದ ಗಡುವು ಮೀರಿದರೆ ಮತ್ತೆ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಮುಂದೆ ಅನಿರ್ದಿಷ್ಟ ಧರಣಿ ಹೋರಾಟ ನಡೆಸಲಾಗುವುದು ಎಂದು ಸಂಘಟನೆ ತಿಳಿಸಿದೆ.

ಪ್ರಮುಖ ಬೇಡಿಕೆಗಳು:

1. ಬಾಕಿ ಇರುವ ಸಂಪೂರ್ಣ ವೇತನವನ್ನು ತಕ್ಷಣ ಪಾವತಿಸಬೇಕು ಹಾಗೂ ತಡೆಹಿಡಿದ ಪರಿಷ್ಕೃತ ವೇತನವನ್ನು ಕೂಡಲೇ

ಹೊರಗುತ್ತಿಗೆ ನೌಕರರಿಗೆ ಉದ್ಯೋಗ ಭದ್ರತೆ ಒದಗಿಸಬೇಕು.

3. ಖಾಯಂ ನೇಮಕಾತಿಯ ನೆಪವೊಡ್ಡಿ ನೌಕರರನ್ನು ಏಕಾಏಕಿ ವಜಾಗೊಳಿಸುವುದನ್ನು ನಿಲ್ಲಿಸಬೇಕು.

4. ಪ್ರತಿಯೊಬ್ಬ ನೌಕರನಿಗೂ ಕಡ್ಡಾಯವಾಗಿ PF ಹಾಗೂ ESI ಸೌಲಭ್ಯಗಳನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು.

— Ningappa

ಮಲ್ಲಿನ ಮಡಗು ಗ್ರಾಮದಲ್ಲಿ ವಿಬಿ-ಜಿ ರಾಮ್-ಜಿ ಕೂಲಿ ಕಾರ್ಮಿಕರಿಗೆ ಉಚಿತ ಆರೋಗ್ಯ ಶಿಬಿರ - ಬಿಪಿ, ಶುಗರ್, ಕಫ ಪರೀಕ್ಷೆ, ಸ್ಥಳದಲ್ಲೇ ಮಾತ್ರೆ ವಿತರಣೆ - 382 ರೂ. ಸಮಾನ ಕೂಲಿ, ಬಿಮಾ ಯೋಜನೆಗಳ ಬಗ್ಗೆ ಮಾಹಿತಿ



ಮಲ್ಲಿನ ಮಡಗು ಗ್ರಾಮದಲ್ಲಿ ವಿಬಿ-ಜಿ ರಾಮ್-ಜಿ ಕೂಲಿ ಕಾರ್ಮಿಕರಿಗೆ ಉಚಿತ ಆರೋಗ್ಯ ಶಿಬಿರ

ರಾಯಚೂರು: ಮಾನ್ವಿ ತಾಲೂಕಿನ ಸಂಗಾಪುರ ಗ್ರಾಮ ಪಂಚಾಯತಿಯ ಮಲ್ಲಿನ ಮಡಗು ಗ್ರಾಮದಲ್ಲಿ ಇದೇ ನವೆಂಬರ್-17 ರಂದು ವಿಬಿ-ಜಿ ರಾಮ್-ಜಿ (ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್ ಗಾರ್ ಅಂಡ್ ಆಜೀವಿಕ ಮಿಷನ್ ಗ್ರಾಮೀಣ) ಯೋಜನೆಯ ಕೂಲಿ ಕಾರ್ಮಿಕರ ಕೆಲಸದ ಸ್ಥಳದಲ್ಲಿ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಯಿತು.

ಸಂಗಾಪುರದ ಸಮುದಾಯ ಆರೋಗ್ಯ ಅಧಿಕಾರಿ ಸುಭಾನ್ ಮಾತನಾಡಿ, ಆರೋಗ್ಯದ ಬಗ್ಗೆ ಹೆಚ್ಚು ಗಮನ ನೀಡಬೇಕು, ಕೆಲಸ ಮಾಡಲು ಆರೋಗ್ಯ ಮುಖ್ಯ, ಆರೋಗ್ಯವಿಲ್ಲದಿದ್ದರೆ ಕೆಲಸ ಮಾಡಲು ಸಾಧ್ಯವಿಲ್ಲ, ಗ್ರಾಮೀಣ ಮಟ್ಟದಲ್ಲಿ ಉಪ-ಕೇಂದ್ರಕ್ಕೆ ಹೋಗಿ ಆರೋಗ್ಯ ತಪಾಸಣೆ ಮಾಡಿಸುವುದಿಲ್ಲ, ಅದಕ್ಕಾಗಿ ಕಾಮಗಾರಿ ಸ್ಥಳದಲ್ಲಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ, ಕೈ ತೊಳೆದುಕೊಂಡು ಊಟ ಮಾಡಬೇಕು, ನಿರಂತರ ಕಫ ಇರುವವರು ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಂಗಾಪುರ ಗ್ರಾಮದ ಸಮುದಾಯ ಆರೋಗ್ಯ ಅಧಿಕಾರಿ ಸುಭಾನ್ ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ತನುಜಾ ಅವರು ಕೂಲಿ ಕಾರ್ಮಿಕರಿಗೆ ಬಿಪಿ, ಶುಗರ್, ಅತಿಯಾದ ಕೆಮ್ಮು ಇರುವ ವ್ಯಕ್ತಿಗಳಿಗೆ ಗಂಟಲು ಕಫ ಪರೀಕ್ಷೆ ಮಾಡುವುದರ ಜೊತೆಗೆ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ಜ್ವರ, ಕೆಮ್ಮು ಹಾಗೂ ಇನ್ನಿತರ ಸಣ್ಣಪುಟ್ಟ ಕಾಯಿಲೆಗಳಿಗೆ ಸ್ಥಳದಲ್ಲಿಯೇ ಮಾತ್ರೆ ನೀಡಿದರು.

ತಾಲೂಕು ಪಂಚಾಯಿತಿ ಮಾನ್ವಿಯ ತಾಲೂಕು ಐಇಸಿ ಸಂಯೋಜಕ ಈರೇಶ ಮಾತನಾಡಿ, ಮೇಟಿಗಳು ಎನ್ ಎಂ ಎಂ ಎಸ್ ತಂತ್ರಾಂಶದಲ್ಲಿ ಮುಖ ಚಹರೆ ಕಡ್ಡಾಯವಾಗಿ ಎರಡು ಬಾರಿ ಹಾಜರಾತಿ ದಾಖಲಿಸಬೇಕು, ವಲಸೆ ಹೋಗಬೇಡಿ ನಿಮ್ಮೂರಲ್ಲೇ ಉದ್ಯೋಗ ಖಾತರಿ ಇದೆ ಹಾಗೂ ಸ್ತ್ರೀ ಚೇತನ ಅಭಿಯಾನದಡಿ ಗಂಡು ಮತ್ತು ಹೆಣ್ಣಿಗೆ 382 ರೂ. ಗಳ ಸಮಾನ ಕೂಲಿ ಇದೆ ಎಂದು ತಿಳಿಸಿದರು.

ಸಂಗಾಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸೈಯದ್ ಶಾ ಮಾತನಾಡಿ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಬಗ್ಗೆ ಮಾಹಿತಿ ನೀಡಿದರು.

ಸಾಮಾಜಿಕ ಭದ್ರತೆ ಕಲ್ಪಿಸಲು ಯೋಜನೆಯಡಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷ ಚೇತನರು ಹಾಗೂ ಗರ್ಭಿಣಿಯರಿಗೆ ಶೇಕಡಾ 50 ರಷ್ಟು ಕೆಲಸ ಮಾಡಿದರೂ ಪೂರ್ತಿ ಪ್ರಮಾಣದ ಕೂಲಿ ನೀಡಲಾಗುತ್ತದೆ. ತಾವು ನಿರ್ವಹಿಸುವ ಕೆಲಸದ ಆಧಾರದ ಮೇಲೆ ಕೂಲಿ ನೀಡಲಾಗುತ್ತಿದೆ. ಕೂಲಿ ಕಾರ್ಮಿಕರು ಎರಡು ಸಲ ಹಾಜರಾತಿ ಹಾಕಿದ ಮೇಲೆ ಮನೆಗೆ ಹೋಗಬೇಕು ಎಂದು ತಿಳಿಸಿದರು.

ಸದರಿ ಸಂದರ್ಭದಲ್ಲಿ ಕಪಗಲ್ ಗ್ರಾಮ ಪಂಚಾಯಿತಿ ಬಿಎಫ್ಟಿ ರಾಯಪ್ಪ, ಗ್ರಾಮದ ವಿಬಿ-ಜಿ ರಾಮ್-ಜಿ ಕೂಲಿ ಕಾರ್ಮಿಕರು

ರೈತರ ಹಿತಕ್ಕಾಗಿ ಗಬ್ಬೂರಿನಿಂದ ನಾರಾಯಣಪುರ ಜಲಾಶಯದವರೆಗೆ ಪಾದಯಾತ್ರೆ: ಜಾಲಹಳ್ಳಿಗೆ ತಲುಪಿದ ಹೋರಾಟಗಾರರುನ.20ರಂದು ನಾರಾಯಣಪುರ ಜಲಾಶಯಕ್ಕೆ ಮುತ್ತಿಗೆ; ಪಾದಯಾತ್ರೆಗೆ ಜಾಲಹಳ್ಳಿ ರೈತರು, ವಿವಿಧ ಪಕ್ಷಗಳ ಮುಖಂಡರು ಹಾಗೂ ಸಾರ್ವಜನಿಕರಿಂದ ಬೆಂಬಲ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ರೈತರ ಹಿತಕ್ಕಾಗಿ ಗಬ್ಬೂರಿನಿಂದ ನಾರಾಯಣಪುರ ಜಲಾಶಯದವರೆಗೆ ಪಾದಯಾತ್ರೆ: ಜಾಲಹಳ್ಳಿಗೆ ತಲುಪಿದ ಹೋರಾಟಗಾರರು

ನ.20ರಂದು ನಾರಾಯಣಪುರ ಜಲಾಶಯಕ್ಕೆ ಮುತ್ತಿಗೆ; ಪಾದಯಾತ್ರೆಗೆ ಜಾಲಹಳ್ಳಿ ರೈತರು, ವಿವಿಧ ಪಕ್ಷಗಳ ಮುಖಂಡರು ಹಾಗೂ ಸಾರ್ವಜನಿಕರಿಂದ ಬೆಂಬಲ

ಜಾಲಹಳ್ಳಿ, ನ.17: ರೈತರ ಹಿತದೃಷ್ಟಿಯಿಂದ ಕಾಲುವೆಗಳಿಗೆ ನೀರು ಹರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಅಭಿವೃದ್ಧಿ ಸೇನೆ, ಬೆಂಗಳೂರು ವತಿಯಿಂದ ರಾಜ್ಯಾಧ್ಯಕ್ಷ ಮಸ್ತಾನ್ ನಾಯಕ್ ಅವರ ನೇತೃತ್ವದಲ್ಲಿ ನವೆಂಬರ್ 15ರಿಂದ ಗಬ್ಬೂರಿನಿಂದ ನಾರಾಯಣಪುರ ಜಲಾಶಯದವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆ ಮೂರನೇ ದಿನವಾದ ಮಂಗಳವಾರ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯ ಬಸವೇಶ್ವರ ವೃತ್ತಕ್ಕೆ ತಲುಪಿತು.

ಪಾದಯಾತ್ರೆ ಜಾಲಹಳ್ಳಿ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು, ರೈತ ಮುಖಂಡರು, ವಿವಿಧ ಪಕ್ಷಗಳ ಮುಖಂಡರು ಹಾಗೂ ಸಾರ್ವಜನಿಕರು ಹೋರಾಟಗಾರರನ್ನು ಆತ್ಮೀಯವಾಗಿ ಸ್ವಾಗತಿಸಿ, ಸನ್ಮಾನಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಬೆಂಬಲ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಚಂದಪ್ಪ ಬುದ್ಧಿನ್ನಿ ಅವರು, ರೈತರ ಹಿತಕ್ಕಾಗಿ ಕಾಲುವೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ಮಸ್ತಾನ್ ನಾಯಕ್ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಪಾದಯಾತ್ರೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ನ.20ರಂದು ನಡೆಯಲಿರುವ ನಾರಾಯಣಪುರ ಜಲಾಶಯ ಮುತ್ತಿಗೆ ಕಾರ್ಯಕ್ರಮದಲ್ಲಿ ಎಲ್ಲ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಕರೆ ನೀಡಿದರು.

ಬಾಕ್ಸ್ ನಲ್ಲಿ

ಹೋರಾಟಗಾರ ಗಿರಿಯಪ್ಪ ಪೂಜಾರಿ ಮಾತನಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರ ಹಿತ ಕಾಪಾಡುವಲ್ಲಿ ವಿಫಲವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕರ್ನಾಟಕದ ಜಲಾಶಯಗಳಿಗೆ ನೀರು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರ ಸರ್ವಪಕ್ಷ ನಿಯೋಗದೊಂದಿಗೆ ಕೇಂದ್ರ ಸರ್ಕಾರವನ್ನು ಭೇಟಿ ಮಾಡಿ ನೀರು ಬಿಡುಗಡೆಗೆ ಒತ್ತಡ ಹೇರಬೇಕು ಎಂದು ಆಗ್ರಹಿಸಿದರು. ರೈತರ ಹಿತಕ್ಕಾಗಿ ನಡೆಯುತ್ತಿರುವ ಈ ಹೋರಾಟಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು.

ಬಾಕ್ಸ್ ನಲ್ಲಿ

ಪಾದಯಾತ್ರೆಯ ನೇತೃತ್ವ ವಹಿಸಿರುವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಅಭಿವೃದ್ಧಿ ಸೇನೆಯ ರಾಜ್ಯಾಧ್ಯಕ್ಷ ಮಸ್ತಾನ್ ನಾಯಕ್ ಮಾತನಾಡಿ, ನ.20ರಂದು ನಾರಾಯಣಪುರ ಜಲಾಶಯಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಹೋರಾಟಕ್ಕೆ ರೈತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸಮಸ್ಯೆಗಳ ಕುರಿತು ವಿಧಾನಸಭೆಯಲ್ಲಿ ಧ್ವನಿ ಎತ್ತುವ ಬದಲು ತೋರಿಕೆಗಾಗಿ ಹೋರಾಟ ನಡೆಸುತ್ತಿದ್ದಾರೆ ಎಂದು ಟೀಕಿಸಿದರು. ಸಿರವಾರ ಕ್ರಾಸ್‌ನಲ್ಲಿ ಹೋರಾಟ ನಡೆಸಿ, ಬೆಂಗಳೂರಿನ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಜನಪ್ರತಿನಿಧಿಗಳು ಹೇಳಿಕೆ ನೀಡಿದ್ದಾರೆ. ಅವರು ನಿಜವಾಗಿಯೂ ರೈತರ ಪರವಾಗಿದ್ದರೆ ತಮ್ಮ ಮಾತಿನಂತೆ ನಡೆದುಕೊಳ್ಳಬೇಕು. ಜಿಲ್ಲೆಯ ಹಾಗೂ ತಾಲ್ಲೂಕಿನ ಜನಪ್ರತಿನಿಧಿಗಳು ರೈತರ ಪರವಾಗಿ ಪರಿಣಾಮಕಾರಿಯಾಗಿ ಧ್ವನಿ ಎತ್ತುವಲ್ಲಿ ವಿಫಲರಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಅಭಿವೃದ್ಧಿ ಸೇನೆಯ ರಾಯಚೂರು ಜಿಲ್ಲಾಧ್ಯಕ್ಷ ಸಂಗಮೇಶ್ ನಾಯಕ್, ಜಿಲ್ಲಾ ಉಪಾಧ್ಯಕ್ಷ ಆಂಜನೇಯ ಶಾಸ್ತ್ರಿ, ಲಿಂಗಸುಗೂರು ತಾಲ್ಲೂಕು ಅಧ್ಯಕ್ಷ ದೇಸಾಯಿ ನಾಯಕ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಹಲವು ರೈತ ಮುಖಂಡರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

ಬಸವೇಶ್ವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾಲಹಳ್ಳಿಯ ಪ್ರಗತಿಪರರು ಹಾಗೂ ವಿವಿಧ ಪಕ್ಷಗಳ ಮುಖಂಡರು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಈ ಸಂದರ್ಭದಲ್ಲಿ ಚಂದಪ್ಪ ಬುದ್ಧಿನ್ನಿ, ಭೀಮಣ್ಣ ವಿರಗೋಟ್, ತಿಮ್ಮಣ್ಣ ನಾಯಕ ದಿವಾನ, ಈಶಣ್ಣ ಕಾಟಮಳ್ಳಿ, ಗಿರಿಯಪ್ಪ ಪೂಜಾರಿ, ರಂಗಪ್ಪ ಬಂಡಿ, ಯಮನೂರಪ್ಪ ನಾಯಕ, ಬಸವರಾಜ್ ಗೋಪಾಲಪುರ, ಸಲಬಣ್ಣ ಸಾಹುಕಾರ್, ಭೀಮನಗೌಡ ಪಾಟೀಲ್, ಮಹಾದೇವ ಯಾದವ್ ಸೇರಿದಂತೆ ಜಾಲಹಳ್ಳಿ ಸುತ್ತಮುತ್ತಲಿನ ಗ್ರಾಮಗಳ ರೈತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ನಾರಾಯಣಪುರ ಬಲದಂಡೆ ಕಾಲುವೆಗೆ ನಿರಂತರ ನೀರು ಹರಿಸಲು ಆಗ್ರಹಿಸಿ ಪಾದಯಾತ್ರೆ: ಜಾಲಹಳ್ಳಿಯಲ್ಲಿ ಅದ್ದೂರಿ ಸ್ವಾಗತಮೂರನೇ ದಿನಕ್ಕೆ ಕಾಲಿಟ್ಟ ಗಬ್ಬೂರಿನಿಂದ ಆರಂಭವಾದ ಪಾದಯಾತ್ರೆ; ನ.20ರಂದು ನಾರಾಯಣಪುರ ಜಲಾಶಯ ಮುತ್ತಿಗೆ ಹೋರಾಟಕ್ಕೆ ರೈತ ಸಂಘಟನೆಗಳಕರೆ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ನಾರಾಯಣಪುರ ಬಲದಂಡೆ ಕಾಲುವೆಗೆ ನಿರಂತರ ನೀರು ಹರಿಸಲು ಆಗ್ರಹಿಸಿ ಪಾದಯಾತ್ರೆ: ಜಾಲಹಳ್ಳಿಯಲ್ಲಿ ಅದ್ದೂರಿ ಸ್ವಾಗತ

ಮೂರನೇ ದಿನಕ್ಕೆ ಕಾಲಿಟ್ಟ ಗಬ್ಬೂರಿನಿಂದ ಆರಂಭವಾದ ಪಾದಯಾತ್ರೆ; ನ.20ರಂದು ನಾರಾಯಣಪುರ ಜಲಾಶಯ ಮುತ್ತಿಗೆ ಹೋರಾಟಕ್ಕೆ ರೈತ ಸಂಘಟನೆಗಳ ಕರೆ

ಜಾಲಹಳ್ಳಿ, ನ.17: ನಾರಾಯಣಪುರ ಬಲದಂಡೆ ಕಾಲುವೆಗೆ ಡಿಸೆಂಬರ್ ಅಂತ್ಯದವರೆಗೆ ನಿರಂತರವಾಗಿ ನೀರು ಹರಿಸಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಅಭಿವೃದ್ಧಿ ಸಂಘಟನೆಯ ಬೆಂಗಳೂರು ರಾಜ್ಯಾಧ್ಯಕ್ಷ ಮಾಸ್ತಾನ್ ನಾಯಕ ಅವರ ನೇತೃತ್ವದಲ್ಲಿ ನ.15ರಂದು ಗಬ್ಬೂರಿನಿಂದ ಆರಂಭವಾದ ಪಾದಯಾತ್ರೆ ಮಂಗಳವಾರ ಮೂರನೇ ದಿನಕ್ಕೆ ಕಾಲಿಟ್ಟಿತು.

ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಪಟ್ಟಣದ ಅಂಬೇಡ್ಕರ್ ವೃತ್ತಕ್ಕೆ ಪಾದಯಾತ್ರೆ ತಲುಪುತ್ತಿದ್ದಂತೆ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಹಾಗೂ ರಾಜಕೀಯ ಪಕ್ಷಗಳ ಮುಖಂಡರು ರೈತ ಹೋರಾಟಗಾರರನ್ನು ಅದ್ದೂರಿಯಾಗಿ ಸ್ವಾಗತಿಸಿದರು.

ಸಂಘದ ರಾಜ್ಯಾಧ್ಯಕ್ಷ ಮಾಸ್ತಾನ್ ನಾಯಕ, ರೈತರು ತೀವ್ರ ಸಂಕಷ್ಟದಲ್ಲಿದ್ದರೂ ಜನಪ್ರತಿನಿಧಿಗಳು ಅವರ ಸಮಸ್ಯೆಗಳ ಬಗ್ಗೆ ಸೂಕ್ತ ಕಾಳಜಿ ವಹಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಶಾಸಕರು, ಸಂಸದರು ಹಾಗೂ ಮಾಜಿ ಜನಪ್ರತಿನಿಧಿಗಳು ರೈತರ ಪರವಾಗಿ ಧ್ವನಿ ಎತ್ತುತ್ತಿಲ್ಲ. ಹೀಗಾಗಿ ರೈತರು ಎಚ್ಚೆತ್ತುಕೊಂಡು ಪಕ್ಷಭೇದ ಮರೆತು ಒಗ್ಗಟ್ಟಿನ ಹೋರಾಟಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಎಂ.ಬಿ. ಪಾಟೀಲ್ ಅವರು 12 ಟಿಎಂಸಿ ಹಾಗೂ ಕಾಶ

ಜಾಲಹಳ್ಳಿ**

— Khaja Hussain

ರಾತ್ರಿ ಬಸ್‌ಗಾಗಿ ಅಂಬೇಡ್ಕರ್ ವೃತ್ತದಲ್ಲಿ ಶಾಲಾ ವಿದ್ಯಾರ್ಥಿಗಳ ಪ್ರತಿಭಟನೆಸಾರಿಗೆ ಇಲಾಖೆಯ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳಿಗೆ ತೊಂದರೆ ಆರೋಪ; ನ.19ರಂದು ದೇವದುರ್ಗ ಬಸ್ ಡಿಪೋ ಮುತ್ತಿಗೆಹಾಕುವ ಎಚ್ಚರಿಕೆ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ರಾತ್ರಿ ಬಸ್‌ಗಾಗಿ ಅಂಬೇಡ್ಕರ್ ವೃತ್ತದಲ್ಲಿ ಶಾಲಾ ವಿದ್ಯಾರ್ಥಿಗಳ ಪ್ರತಿಭಟನೆ

ಸಾರಿಗೆ ಇಲಾಖೆಯ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳಿಗೆ ತೊಂದರೆ ಆರೋಪ; ನ.19ರಂದು ದೇವದುರ್ಗ ಬಸ್ ಡಿಪೋ ಮುತ್ತಿಗೆ ಹಾಕುವ ಎಚ್ಚರಿಕೆ

ಜಾಲಹಳ್ಳಿ, ನ.17: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಸಂಘಟನೆಗಳ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಮೇದನಾಪುರ ಹಾಗೂ ಬಾಗೂರು ಗ್ರಾಮಗಳಿಗೆ ತೆರಳುವ ಶಾಲಾ ವಿದ್ಯಾರ್ಥಿಗಳು ಪ್ರತಿದಿನ ಸಂಜೆ 4.30ಕ್ಕೆ ಶಾಲೆ ಮುಗಿಸಿಕೊಂಡು ಬಸ್‌ಗಾಗಿ ಕಾಯಬೇಕಾದ ಪರಿಸ್ಥಿತಿ ಇದೆ. ನಿಗದಿಯಂತೆ ಸಂಜೆ 5 ಗಂಟೆಗೆ ಬರಬೇಕಾದ ಬಸ್ ಒಂದು ವಾರದಿಂದ ಸರಿಯಾದ ಸಮಯಕ್ಕೆ ಬರುತ್ತಿಲ್ಲ. ಬದಲಾಗಿ ರಾತ್ರಿ 7.30ರಿಂದ 8 ಗಂಟೆಯವರೆಗೆ ತಡವಾಗಿ ಬರುತ್ತಿದೆ. ಇದರಿಂದ ವಿದ್ಯಾರ್ಥಿಗಳು ಮನೆಗೆ ತಲುಪಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸಾರಿಗೆ ಇಲಾಖೆಯ ನಿರ್ಲಕ್ಷ್ಯದಿಂದ ವಿದ್ಯಾರ್ಥಿಗಳ ಶಿಕ್ಷಣ ಹಾಗೂ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತಿದೆ. ದೇವದುರ್ಗ ಸಾರಿಗೆ ಘಟಕದಲ್ಲಿ ಸಮರ್ಪಕ ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು ಪ್ರತಿದಿನ ಪರದಾಡುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಾಕ್ಸ್

ಈ ಸಂದರ್ಭದಲ್ಲಿ ಎಸ್‌ಎಫ್‌ಐ ಮುಖಂಡ ಸಂತೋಷ್ ಸ್ವಾಪ್ಲಿ ಮಾತನಾಡಿ, "ವಿದ್ಯಾರ್ಥಿಗಳು ಸಂಜೆ 5 ಗಂಟೆಗೆ ಮನೆ ಸೇರಬೇಕಾದವರು ಸಾರಿಗೆ ಇಲಾಖೆಯ ನಿರ್ಲಕ್ಷ್ಯದಿಂದ ರಾತ್ರಿ 8 ಗಂಟೆಗೆ ಮನೆ ತಲುಪುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಜನಪ್ರತಿನಿಧಿಗಳು ಸ್ಪಂದಿಸಬೇಕು" ಎಂದು ಒತ್ತಾಯಿಸಿದರು.

ಬಾಕ್ಸ್

ಕಾರ್ಮಿಕ ಸಂಘಟನೆಯ ರಾಜ್ಯ ಮುಖಂಡ ಶಬ್ಬೀರ್ ಜಾಲಹಳ್ಳಿ ಮಾತನಾಡಿ, ದೇವದುರ್ಗ ಸಾರಿಗೆ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ತಾಲ್ಲೂಕಿನ ವಿದ್ಯಾರ್ಥಿಗಳು ಹಾಗೂ ಗ್ರಾಮೀಣ ಜನರು ತೊಂದರೆ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳ ಬಸ್ ಸಮಸ್ಯೆ ಬಗೆಹರಿಸುವಲ್ಲಿ ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಬೇಕು. ಇಲ್ಲದಿದ್ದರೆ ನವೆಂಬರ್ 19ರಂದು ದೇವದುರ್ಗ ಬಸ್ ಡಿಪೋಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದರು.

ಬಾಕ್ಸ್

ಎಸ್ ಎಫ್‌ಐ ಜಿಲ್ಲಾ ಮುಖಂಡ ಮಹಾಲಿಂಗ ದೊಡ್ಡಮನಿ ಮಾತನಾಡಿ, ದೇವದುರ್ಗ ತಾಲ್ಲೂಕಿನ ಹಲವು ಗ್ರಾಮಗಳಿಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸುವಲ್ಲಿ ಸಾರಿಗೆ ಇಲಾಖೆ ವಿಫಲವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಕ್ಷಣವೇ ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೆ ನ.19ರಂದು ಬಸ್ ಡಿಪೋ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ರಾಜು ನಾಯಕ್, ರಿಯಾಜ್ ಅರ್ತಿ, ಭೂತಪ್ಪ ದೇವರಮನಿ, ಅಮೀರ್ ಪಟೇಲ್, ಕೊಂಡಯ್ಯ, ಮಲ್ಲು, ಹೈದರಸಾಬ್ ಮುಲ್ಲಾ, ಮನ್ಸೂರ್, ಮೆಹಬೂಬ್ ಬಲಿಗಾರ್, ನಬಿ ಟೈಲರ್, ರಂಗನಾಥ್, ರಿಯಾಜ್ ಸೇರಿದಂತೆ ಸಂಘಟನೆಗಳ ಮುಖಂಡರು, ಶಾಲಾ ವಿದ್ಯಾರ್ಥಿಗಳು, ಪಾಲಕರು ಹಾಗೂ ಬಾಗೂರು ಗ್ರಾಮದ ನಿವಾಸಿಗಳು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಸೋಲಾಪುರ: ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕೂಲಿಕಾರರ ಸಂಘದಿಂದ ಪಂಚಾಯತಿ ಮುಂದೆ ಪ್ರತಿಭಟನೆ



ಸಿಂಧನೂರು: ಸೋಲಾಪುರ ಗ್ರಾಮದಲ್ಲಿ ಕುಡಿಯುವ ನೀರು,ಕೂಲಿಕಾರರ ಕೆಲಸ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಗ್ರಾಮ ಪಂಚಾಯತಿ ಮುಂದೆ ದಿಢೀರ್ ಪ್ರತಿಭಟನೆ

ಕೃಷಿ ಕೂಲಿಕಾರರ ಸಂಘಟನೆ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಅಪ್ಪಣ್ಣ ಕಾಂಬ್ಳೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಸೌಕರ್ಯ ನೀಡದಿರುವುದನ್ನು ಖಂಡಿಸಿ ತರಾಟೆಗೆ ತೆಗೆದುಕೊಂಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಇದೇ ಸಂದರ್ಭದಲ್ಲಿ ಸೋಲಾಪುರ ಗ್ರಾಮದ ಕೂಲಿಕಾರರು,ಪಂಚಾಯತಿ ಸಿಬ್ಬಂದಿಗಳು ,ಸಾರ್ವಜನಿಕರು ಇದ್ದರು

— Ningappa

ಚಲುವಾದಿ ದೊಡ್ಡಿ ಶಾಲೆಗೆ SFI ಮುಖಂಡರ ಭೇಟಿ - 15 ದಿನಗಳಿಂದ ಬೋರ್‌ವೆಲ್ ಕೆಟ್ಟು ಕುಡಿಯುವ ನೀರಿಗೆ ತೊಂದರೆ - ಗಿಡಗಂಟಿಗಳಿಂದ ಹಾವುಗಳ ಭೀತಿ - ತಕ್ಷಣ ದುರಸ್ತಿಗೆ ಆಗ್ರಹಿಸಿ ಗಲಗ ಗ್ರಾ.ಪಂ.ಗೆ ಮನವಿ



ಚಲುವಾದಿ ದೊಡ್ಡಿ ಶಾಲೆಗೆ SFI ಮುಖಂಡರ ಭೇಟಿ - ಬೋರ್‌ವೆಲ್ ದುರಸ್ತಿಗೆ ಆಗ್ರಹಿಸಿ ಮನವಿ

ರಾಯಚೂರು/ ಅರಕೇರಾ: ಗಲಗ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಚಲುವಾದಿ ದೊಡ್ಡಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಇಂದು SFI ಸಂಘಟನೆ ಮುಖಂಡರು ಭೇಟಿ ನೀಡಿ, ಶಾಲೆಯಲ್ಲಿರುವ ಮೂಲಭೂತ ಸಮಸ್ಯೆಗಳ ಕುರಿತು ಶಿಕ್ಷಕರೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಂಡರು.

ಶಾಲೆಯಲ್ಲಿ ಕಳೆದ ಸುಮಾರು 15 ದಿನಗಳಿಂದ ಬೋರ್‌ವೆಲ್ ಕೆಟ್ಟುಹೋಗಿದ್ದು, ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಂತಾಗಿದೆ.

ಅಲ್ಲದೆ, ಶಾಲೆಯ ಸುತ್ತಮುತ್ತ ಗಿಡಗಂಟಿಗಳು ಬೆಳೆದು ನಿಂತಿದ್ದು, ಹಾವುಗಳು ಹಾಗೂ ವಿಷಕಾರಿ ಕ್ರಿಮಿಕೀಟಗಳು ಶಾಲಾ ಕೊಠಡಿಗಳಿಗೆ ಪ್ರವೇಶಿಸುವ ಅಪಾಯವಿದೆ. ಇದರಿಂದ ಮಕ್ಕಳ ಆರೋಗ್ಯ ಮತ್ತು ಸುರಕ್ಷತೆಗೆ ತೊಂದರೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣವೇ ಬೋರ್‌ವೆಲ್ ದುರಸ್ತಿಗೊಳಿಸಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಹಾಗೂ ಶಾಲೆಯ ಸುತ್ತಮುತ್ತಲಿನ ಗಿಡಗಂಟಿಗಳನ್ನು ತೆರವುಗೊಳಿಸಿ ಸ್ವಚ್ಛತೆ ಮತ್ತು ಸುರಕ್ಷತೆಯನ್ನು ಕಾಪಾಡಬೇಕು ಎಂದು ಆಗ್ರಹಿಸಿ ಗಲಗ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

SFI ತಾಲೂಕು ಉಪಾಧ್ಯಕ್ಷರು, ಸಂತೋಷ ತ್ಯಾಪ್ಲಿ – SFI ತಾಲೂಕು ಕಾರ್ಯದರ್ಶಿ, ವೆಂಕಟೇಶ್ ದೊರೆ, DYFI ತಾಲೂಕು ಕಾರ್ಯದರ್ಶಿಯಾದ ನಿಂಗಯ್ಯ ಸುಣ್ಣದಕಲ್ ಮತ್ತು ಗ್ರಾಮಸ್ಥರು ಇದ್ದರು.

— Ningappa

ಮಾನ್ವಿಯಲ್ಲಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ - ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಖಾಲೀದ್ ಅಹಮ್ಮದ್ ಅಧ್ಯಕ್ಷತೆಯಲ್ಲಿ ಸಭೆ - ವಸತಿ, ವಿಬಿ-ಜಿ ರಾಮ್-ಜಿ, ಕರ ವಸೂಲಾತಿ, ಸ್ವಚ್ಛ ಭಾರತ ಮಿಷನ್, ಕುಡಿಯುವ ನೀರಿನ ಬಗ್ಗೆ ಪರಿಶೀಲನೆ



ಮಾನ್ವಿಯಲ್ಲಿ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆ

ಮಾನ್ವಿ:

ಮಾನ್ವಿ ತಾಲೂಕಿನ ಶಾಸಕರ ಭವನದಲ್ಲಿ ಇಂದು ದಿನಾಂಕ 04-11-2026 ರಂದು ತಾಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಖಾಲೀದ್ ಅಹಮ್ಮದ್ ರವರ ಅಧ್ಯಕ್ಷತೆಯಲ್ಲಿ ವಿವಿಧ ಯೋಜನೆಗಳ ಬಗ್ಗೆ ಪ್ರಗತಿ ಪರಿಶೀಲನೆ ಸಭೆ ನಡೆಯಿತು.

ಸಭೆಯಲ್ಲಿ ವಸತಿ ಯೋಜನೆ, ವಿಬಿ-ಜಿ ರಾಮ್-ಜಿ ಯೋಜನೆ ಪ್ರಗತಿ ಪರಿಶೀಲನೆ, ಕರ ವಸೂಲಾತಿ ಬಗ್ಗೆ, ಸ್ವಚ್ಛ ಭಾರತ ಮಿಷನ್ ಯೋಜನೆ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಸುದೀರ್ಘವಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಜೊತೆಗೆ ಚರ್ಚಿಸಲಾಯಿತು.

ಇದೇ ಸಂದರ್ಭದಲ್ಲಿ ಮಾನ್ವಿ ತಾಲೂಕಿನ ಎಲ್ಲ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರೇಡ್ ಒನ್ ಕಾರ್ಯದರ್ಶಿಗಳು, ಗ್ರೇಡ್ ಟು ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಕರ ವಸೂಲಿಗಾರರು, ಡಿಇಓಗಳು ಹಾಗೂ ತಾಲೂಕ ಪಂಚಾಯಿತಿ ಸಿಬ್ಬಂದಿಗಳು, ಹಾಗೂ ವಿಬಿ-ಜಿ ರಾಮ್-ಜಿ ಯೋಜನೆ ಸಿಬ್ಬಂದಿಗಳು ಹಾಜರಿದ್ದರು.

— Ningappa

ಮೂಲಭೂತ ಸೌಕರ್ಯಕ್ಕೆ ಆಗ್ರಹಿಸಿ ದಲಿತ ಸಂರಕ್ಷ ಸಮಿತಿಯ ಅನಿರ್ದಿಷ್ಟಾವಧಿ ಧರಣಿ - ಅಧಿಕಾರಿಗಳ ಭರವಸೆ ಮೇರೆಗೆ ತಾತ್ಕಾಲಿಕವಾಗಿ ಹಿಂಪಡೆತ - ಬೇಡಿಕೆ ಈಡೇರದಿದ್ದರೆ ಗ್ರಾ.ಪಂ. ಮುಂದೆ ಉಗ್ರ ಹೋರಾಟದ ಎಚ್ಚರಿಕೆ



ಮೂಲಭೂತ ಸೌಕರ್ಯಕ್ಕೆ ಆಗ್ರಹಿಸಿ ದಲಿತ ಸಂರಕ್ಷ ಸಮಿತಿಯ ಅನಿರ್ದಿಷ್ಟಾವಧಿ ಧರಣಿ - ಅಧಿಕಾರಿಗಳ ಭರವಸೆ ಮೇರೆಗೆ ತಾತ್ಕಾಲಿಕವಾಗಿ ಹಿಂಪಡೆತ

ಲಿಂಗಸಗೂರು:ದಲಿತ ಕಾಲೋನಿ ಹಾಗೂ ಗ್ರಾಮಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ದಲಿತ ಸಂರಕ್ಷ ಸಮಿತಿ (ರಿ), ಕರ್ನಾಟಕ - ಲಿಂಗಸಗೂರು ತಾಲೂಕು ಸಮಿತಿ ವತಿಯಿಂದ ದಿನಾಂಕ 16-11-2026 ರಿಂದ ಹಳೆಯ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಇಂದು ಎರಡನೇ ದಿನಕ್ಕೆ ಕಾಲಿಟ್ಟಿತ್ತು.

ಧರಣಿ ಸ್ಥಳಕ್ಕೆ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ (EO) ನೇತೃತ್ವದಲ್ಲಿ ಸಹಾಯಕ ನಿರ್ದೇಶಕರು (AD) ಹಾಗೂ ತಾಲೂಕು ಪಂಚಾಯಿತಿ ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಚರ್ಚಿಸಿದರು.

ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಸಮಿತಿಯ ಎಲ್ಲಾ ಬೇಡಿಕೆಗಳನ್ನು ಮುಂದಿನ ಎರಡು-ಮೂರು ದಿನಗಳ ಒಳಗಾಗಿ ಪರಿಹರಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದು, ಸಂಘಟನೆಯ ಮನವಿ ಪತ್ರವನ್ನು ಧರಣಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಲಾಗಿದೆ. ಒಂದು ವೇಳೆ ನಿಗದಿತ ಎರಡು-ಮೂರು ದಿನಗಳ ಗಡುವಿನೊಳಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅಧಿಕಾರಿಗಳು ವಿಫಲವಾದಲ್ಲಿ, ಸಂಘಟನೆಯ ವತಿಯಿಂದ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಚೇರಿಯ ಮುಂಭಾಗದಲ್ಲಿ ಪುನಃ ಅನಿರ್ದಿಷ್ಟಾವಧಿ ಧರಣಿ ನಡೆಸುವ ಮೂಲಕ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಸಲ್ಲಿಸಿರುವ ಲಿಖಿತ ಮನವಿ ಪತ್ರದಲ್ಲಿ ಎಚ್ಚರಿಕೆ ನೀಡಲಾಗಿದೆ.

— Ningappa

EDUCATION

ಬೀದರ್ ಪತಂಜಲಿ ಪಬ್ಲಿಕ್ ಶಾಲೆಯಲ್ಲಿ ಮಕ್ಕಳ ದಿನಾಚರಣೆಯಲ್ಲಿ ಮಹಾ ಪುರುಷರ ವೇಷಧಾರಿಗಳು



ಶ್ರೀ ಗಣೇಶ್ವರ ಚಾರಿಟಬಲ್ ಟ್ರಸ್ಟ್ ಸಂಚಾಲಿತ ಬೀದರ್‌ನ ಪತಂಜಲಿ ಪಬ್ಲಿಕ್ ಶಾಲೆಯಲ್ಲಿ ಮಂಗಳವಾರ ಮಕ್ಕಳ ದಿನಾಚರಣಾ ಕಾರ್ಯಕ್ರಮ ಆಯೋಜಿಸಲಾಯಿತು. ಮಕ್ಕಳಿಗೆ ಮಹಾ ಪುರುಷರ ವೇಷ ಧರಿಸುವ ಅವಕಾಶ ನೀಡಲಾಗಿದ್ದು, ಅವರು ಈ ವಿಶಿಷ್ಟ ವೇಷಧಾರಿಗಳಿಂದ ಗಮನ ಸೆಳೆದರು.

ವಿಭಿನ್ನ ಸ್ಪರ್ಧೆಗಳಲ್ಲಿ ಮಕ್ಕಳು ಆಸಕ್ತಿಯಿಂದ ಪಾಲ್ಗೊಂಡು, ತಮ್ಮ ಪ್ರತಿಭೆ ಪ್ರದರ್ಶಿಸಿದರು. ಸ್ಪರ್ಧೆಗಳ ವಿಜೇತರಿಗೆ ಶಾಲೆಯ ಪ್ರಮುಖರು ಬಹುಮಾನ ನೀಡಿ ಪ್ರೋತ್ಸಾಹಿಸಿದರು.

ಕಾರ್ಯಕ್ರಮವನ್ನು ಪತಂಜಲಿ ಯೋಗ ಸಮಿತಿಯ ಜಿಲ್ಲಾ ಘಟಕದ ಅಧ್ಯಕ್ಷ ಯೋಗೇಂದ್ರ ಯದಲಾಪುರೆ ಉದ್ಘಾಟಿಸಿದರು. ಅವರು ಶಿಕ್ಷಣದಿಂದ ಜೀವನದಲ್ಲಿ ಉನ್ನತ ಸಾಧನೆ ಸಾಧ್ಯವೆಂದು ತಿಳಿಸಿದರು. ಶಿಕ್ಷಕಿ ಮಂಗಲಾ ಪಾಟೀಲ ಹೇಳಿದರು, ಮಾಜಿ ಪ್ರಧಾನಿಯ ಜವಾಹರಲಾಲ್ ನೆಹರೂ ಅವರ ಜನ್ಮದಿನವನ್ನು ಮಕ್ಕಳ ದಿನವನ್ನಾಗಿ ಆಚರಿಸಲಾಗುತ್ತದೆ. ಟ್ರಸ್ಟ್ ಅಧ್ಯಕ್ಷೆ ಉಷಾ ಮೇತ್ರೆ ಮಕ್ಕಳಿಗೆ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಪ್ರೋತ್ಸಾಹಿಸಿದರು.

ಮುಖ್ಯಶಿಕ್ಷಕಿ ಸುಪ್ರಿಯಾ ಕುಲಕರ್ಣಿ, ಸಂಘಮಿತ್ರ ಕಿರಣ, ಜ್ಯೋತಿ ಕುಲಕರ್ಣಿ, ಅನಿತಾ ಕಾಂಬಳೆ, ಪವಿತ್ರಾ ಸ್ವಾಮಿ, ಶಾರದಾ ದೊಡ್ಡೆ ಸೇರಿದಂತೆ ಹಲವಾರು ಶಿಕ್ಷಕರು ಹಾಜರಿದ್ದರು. ಆಕಾಶ್ ಮೋರೆ ಸ್ವಾಗತಿಸಿದರು, ಪೂಜಾ ಕೋಳಿ ನಿರೂಪಿಸಿದರು. ಶಾಲೆಯ ಆಡಳಿತಾಧಿಕಾರಿ ಬಸವರಾಜ ಮುಗುಟಾಪುರೆ ನಂದಗಾಂವ್ ವಂದಿಸಿದರು.

— Basavaraj pujari

ಜಾಗೀರ ಜಾಡಲದಿನ್ನಿಯಲ್ಲಿ ನ.21 ರಂದು ರಾಜ್ಯಮಟ್ಟದ ಹೊನಲು ಬೆಳಕಿನ ಖೋ ಖೋ ಪಂದ್ಯಾವಳಿ



ಜಾಗೀರ ಜಾಡಲದಿನ್ನಿಯಲ್ಲಿ ನ.21 ರಂದು ರಾಜ್ಯಮಟ್ಟದ ಹೊನಲು ಬೆಳಕಿನ ಖೋ ಖೋ ಪಂದ್ಯಾವಳಿ

ಅರಕೇರಾ: ತಾಲೂಕಿನ ಜಾಗೀರ ಜಾಡಲದಿನ್ನಿ ಗ್ರಾಮದಲ್ಲಿ ಇದೇ ತಿಂಗಳ ನವೆಂಬರ್ 21, ಶನಿವಾರದಂದು ರಾಜ್ಯಮಟ್ಟದ ಹೊನಲು ಬೆಳಕಿನ ಖೋ ಖೋ ಪಂದ್ಯಾವಳಿ ನಡೆಯಲಿದೆ.

ಭಗತ್ ಸಿಂಗ್ ಯುವಕರ ಬಳಗ, ಜಾಗೀರ ಜಾಡಲದಿನ್ನಿ ಈ ಪಂದ್ಯಾವಳಿಯನ್ನು ಆಯೋಜಿಸಿದೆ.

ಗ್ರಾಮೀಣ ಭಾಗದ ಖೋ ಖೋ ಕ್ರೀಡಾಪಟುಗಳಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ.

— Ningappa

ಬೋಧನೆ ಮತ್ತು ಸಂಶೋಧನೆಯಲ್ಲಿ AI ಪರಿಕರಗಳ ಬಳಕೆ ಕುರಿತು ಅಧ್ಯಾಪಕರಿಗೆ ತರಬೇತಿ



ಹರಿಹರ, ನವೆಂಬರ್ 17: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹರಿಹರದ ಕಂಪ್ಯೂಟರ್ ವಿಜ್ಞಾನ ಮತ್ತು ಬಿಸಿಎ ವಿಭಾಗದ ವತಿಯಿಂದ ಆಂತರಿಕ ಗುಣಮಟ್ಟ ಭರವಸೆ ಕೋಶದ (IQAC) ಅಡಿಯಲ್ಲಿ ಮಂಗಳವಾರ ಕೃತಕ ಬುದ್ಧಿಮತ್ತೆ (AI) ಪರಿಕರಗಳ ಪ್ರಾಯೋಗಿಕ ಬಳಕೆ ಕುರಿತು ಅಧ್ಯಾಪಕ ಅಭಿವೃದ್ಧಿ ಕಾರ್ಯಕ್ರಮ (FDP) ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಬೋಧನೆ, ಸಂಶೋಧನೆ ಹಾಗೂ ಆಡಳಿತದ ಕಾರ್ಯಗಳಲ್ಲಿ AI ಪರಿಕರಗಳ ಪರಿಣಾಮಕಾರಿ ಬಳಕೆ ಕುರಿತು ಅಧ್ಯಾಪಕರಿಗೆ ಮಾರ್ಗದರ್ಶನ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಜಿ.ಎಂ. ವಿಶ್ವವಿದ್ಯಾಲಯದ FCIT ವಿಭಾಗದ ಡೀನ್ ಡಾ. ಶ್ವೇತಾ ಮರಿಗೌಡರ್, AI ಬಳಸಿ ಸಂಶೋಧನೆ ನಡೆಸುವ ವಿಧಾನ, ಸಂಶೋಧನಾ ಲೇಖನಗಳ ಪ್ರಕಟಣೆ ಹಾಗೂ ಕೃತಿಚೌರ್ಯ ತಡೆಗಟ್ಟುವ ಬಗ್ಗೆ ವಿವರಿಸಿದರು. ಸಂಶೋಧನೆಯಲ್ಲಿ AI ಬಳಕೆಯ ಸದುಪಯೋಗ ಮತ್ತು ನೈತಿಕ ಜವಾಬ್ದಾರಿಗಳ ಬಗ್ಗೆಯೂ ಅಧ್ಯಾಪಕರಿಗೆ

ಪ್ರಶಸ್ತಿ ಪುರಸ್ಕೃತ ಈರಣ್ಣ ರುದ್ರಾಕ್ಷಿ ಅವರಿಗೆ ಆತ್ಮೀಯ ಸನ್ಮಾನ - ಶಾಂತಿನಗರದ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ಗಣ್ಯರು, ಮುಖಂಡರಿಂದ ಶಾಲು ಹೊದಿಸಿ, ಹಾರ ಹಾಕಿ ಗೌರವ - ನಗರದ ಕೀರ್ತಿಯನ್ನು ರಾಜ್ಯಮಟ್ಟಕ್ಕೆ ಕೊಂಡೊಯ್ದ ಸಾಧನೆಗೆ ಶ್ಲಾಘನೆ



ದೇವದುರ್ಗದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಈರಣ್ಣ ರುದ್ರಾಕ್ಷಿ ಅವರಿಗೆ ಆತ್ಮೀಯ ಸನ್ಮಾನ

ರಾಯಚೂರು: ದೇವದುರ್ಗ ಪಟ್ಟಣದ ವಾರ್ಡ್ ನಂಬರ್ 4 ರ ಶಾಂತಿನಗರದ ಮಾಳಗಡ್ಡಿ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ಇಂದು ನವೆಂಬರ್ 17 ರಂದು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಈರಣ್ಣ ರುದ್ರಾಕ್ಷಿ ಅವರನ್ನು ಗಣ್ಯರು ಹಾಗೂ ಸ್ಥಳೀಯ ಮುಖಂಡರು ಶಾಲು ಹೊದಿಸಿ, ಹಾರ ಹಾಕಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿದರು.

ನಗರದ ಕೀರ್ತಿಯನ್ನು ರಾಜ್ಯಮಟ್ಟಕ್ಕೆ ಕೊಂಡೊಯ್ದ ಸಾಧಕರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದ್ದ ಈ ಸರಳ ಹಾಗೂ ಅರ್ಥಪೂರ್ಣ ಸಮಾರಂಭದಲ್ಲಿ, ಮುಖಂಡರು ಈರಣ್ಣ ರುದ್ರಾಕ್ಷಿ ಅವರ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿ ಅಭಿನಂದನೆ ಸಲ್ಲಿಸಿದರು.

ಈ ಸನ್ಮಾನ ಸಂದರ್ಭದಲ್ಲಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಎಸ್‌ಡಿಎಂಸಿ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಜಿ. ಬಸವರಾಜ ನಾಯಕ್, ಹಾಲಿ ಅಧ್ಯಕ್ಷರಾದ ವೆಂಕಟೇಶ್ ನಾಯಕ್ ಸೋಂಕಾರ್, ಹಾಗೂ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಎಚ್ ಶಿವರಾಜ್ ಸರ್ ಮತ್ತು ಬಿಎಸ್‌ಪಿ ಜಿಲ್ಲಾ ಮುಖಂಡರಾದ ಶಿವಪ್ಪ ಬಲಿದವ ಹಾಗೂ ಪ್ರಭು ಕಾಕರಗಲ್ಲು, ರೈತ ಮುಖಂಡರಾದ ಡೆಂಗಿ ಹನುಮಂತರಾಯ ಮತ್ತು ಪ್ರಗತಿಪರ ಮುಖಂಡರಾದ ಶಿವು ಚಲವಾದಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

— Ningappa

ಹಿಂಪಡೆತ - ಎಲ್ಲಾ ಶಾಖೆಗಳಲ್ಲಿ ಬ್ಯಾಂಕಿಂಗ್ ಸೇವೆ ಎಂದಿನಂತೆ - ಗ್ರಾಹಕರಿಗೆ ಕರ್ನಾಟಕ ಬ್ಯಾಂಕ್‌ನಿಂದ SMS ಮೂಲಕ ಮಾಹಿತಿ - UPI, ಮೊಬೈಲ್ ಬ್ಯಾಂಕಿಂಗ್, ATM ಸೇವೆ 24x7 ಲಭ್ಯ



ನ.18 ರ ಬ್ಯಾಂಕ್ ಮುಷ್ಕರ ಹಿಂಪಡೆತ - ಬ್ಯಾಂಕಿಂಗ್ ಸೇವೆ ಎಂದಿನಂತೆ

ರಾಯಚೂರು: ಬ್ಯಾಂಕ್ ಯೂನಿಯನ್‌ಗಳು ನ.18 ರಂದು ಕರೆ ನೀಡಿದ್ದ ಬ್ಯಾಂಕ್ ಮುಷ್ಕರವನ್ನು ಹಿಂಪಡೆದಿವೆ ಎಂದು ಕರ್ನಾಟಕ ಬ್ಯಾಂಕ್ ಗ್ರಾಹಕರಿಗೆ SMS ಮೂಲಕ ತಿಳಿಸಿದೆ.

ಇದರಿಂದಾಗಿ ಕರ್ನಾಟಕ ಬ್ಯಾಂಕ್‌ನ ಎಲ್ಲಾ ಶಾಖೆಗಳ ಬ್ಯಾಂಕಿಂಗ್ ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ. ಉಂಟಾದ ಅನಾನುಕೂಲಕ್ಕೆ ವಿಷಾದ ವ್ಯಕ್ತಪಡಿಸಿದೆ.

ಇದಕ್ಕೂ ಮುನ್ನ ಬ್ಯಾಂಕ್, ತನ್ನ ಗ್ರಾಹಕರಿಗೆ ಅಗತ್ಯ ಬ್ಯಾಂಕಿಂಗ್ ವ್ಯವಹಾರಗಳು, ಲಾಕರ್ ಕಾರ್ಯಾಚರಣೆ ಸೇರಿದಂತೆ 17-11-26 ರೊಳಗೆ ಮುಗಿಸಿಕೊಳ್ಳುವಂತೆ ಸೂಚನೆ ನೀಡಿತ್ತು. ಆದರೂ ಬ್ಯಾಂಕ್‌ನ ಡಿಜಿಟಲ್ ಚಾನೆಲ್‌ಗಳಾದ UPI, ಮೊಬೈಲ್ ಬ್ಯಾಂಕಿಂಗ್, ಇಂಟರ್ನೆಟ್ ಬ್ಯಾಂಕಿಂಗ್ ಮತ್ತು ATM ಗಳು 24x7 ಲಭ್ಯವಿರುತ್ತವೆ ಎಂದು ತಿಳಿಸಿತ್ತು.

ಈಗ ಮುಷ್ಕರ ಹಿಂಪಡೆದಿರುವುದರಿಂದ ಗ್ರಾಹಕರು ಎಂದಿನಂತೆ ಶಾಖೆಗಳಲ್ಲಿ ಸೇವೆ ಪಡೆಯಬಹುದು.

— Ningappa

ಹೋರಾಟಕ್ಕೆ ಸಂದ ಜಯ - ಮರ್ಲಿಂಗ ನಾಯಕ ಅವರ ಹೋರಾಟದ ಫಲವಾಗಿ ನೀರು ಬಿಡುಗಡೆಗೆ ಅಧಿಕಾರಿಗಳ ಒಪ್ಪಿಗೆ - ಶಾಸಕಿ ಕರಿಯಮ್ಮ ನಾಯಕ್ ಅವರ ಹೋರಾಟಕ್ಕೂ ಬೆಂಬಲ - ಮರ್ಲಿಂಗ ನಾಯಕನಂತ ಹೋರಾಟಗಾರರು ತಾಲೂಕಿಗೆ ಬೇಕು, ಅವರ ಹೋರಾಟಕ್ಕೆ ಬೆಂಬಲ ಕೊಡೋಣ ಎಂದು ರೈತ ಮುಖಂಡರ ಕರೆ



ದೇವದುರ್ಗದಲ್ಲಿ ರೈತರ ನೀರಿಗಾಗಿ ಹೋರಾಟಕ್ಕೆ ಸಂದ ಜಯ - ಮರಿಲಿಂಗ ನಾಯಕ ಅವರ ಹೋರಾಟಕ್ಕೆ ಯಲ್ಲಪ್ಪ ಆಲ್ದರ್ತಿ ಅಭಿನಂದನೆ

ದೇವದುರ್ಗ: ರೈತ ಬಾಂಧವರಲ್ಲಿ ಎಲ್ಲರಿಗೂ ಕೈ ಮುಗಿದು ಮನವಿ ಮಾಡಿಕೊಳ್ಳುವುದು ಏನೆಂದರೆ, ನಿನ್ನೆ ದಿ.16ರಂದು ನಮ್ಮ ನೆಚ್ಚಿನ ಶಾಸಕರಾದ ಕರಿಯಮ್ಮ ಜಿ. ನಾಯಕ್ ಅವರು ರೈತರ ಪರವಾಗಿ ಹೋರಾಟವನ್ನು ಹಮ್ಮಿಕೊಂಡಿದ್ದರು ಎಂದು ಮುಖಂಡ ಯಲ್ಲಪ್ಪ ಆಲ್ದರ್ತಿ ತಿಳಿಸಿದರು.

ಇದಕ್ಕಿಂತ ಮುಂಚಿತವಾಗಿ ನಮ್ಮ ಮರ್ಲಿಂಗ ನಾಯಕ ಅವರು ಹೋರಾಟವನ್ನು ಹಮ್ಮಿಕೊಂಡಿದ್ದರು. ಮರ್ಲಿಂಗ ನಾಯಕ ಅವರ ಹೋರಾಟದ ಫಲವಾಗಿ ಇವತ್ತು ಅಧಿಕಾರಿಗಳು ನಾವೇನು ನೀರು ಬಿಡ್ತೀವಿ, ನೀವು ಯಾವುದೇ ಹೋರಾಟ ಮಾಡಬಾರದು ಎಂದು ಸ್ಪಂದನೆ ನೀಡಿದ್ದಾರೆ ಎಂದು ಹೇಳಿದರು.

ಮರ್ಲಿಂಗ ನಾಯಕ ಅವರಿಗೆ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ನಿಮ್ಮಂತಹ ಹೋರಾಟಗಾರರು ಇರಬೇಕು ದೇವದುರ್ಗ ತಾಲೂಕಿನಲ್ಲಿ. ದೇವದುರ್ಗ ತಾಲೂಕಿನಲ್ಲಿ ರೈತರ ಹೋರಾಟಕ್ಕೆ ನೆಚ್ಚಿನ ನಾಯಕ ಅಂದ್ರೆ ಮರ್ಲಿಂಗ ನಾಯಕ ಎಂದು ಮತ್ತೊಂದು ಸಲ ಹೇಳುತ್ತೇವೆ ಎಂದು ತಿಳಿಸಿದರು.

ಮರ್ಲಿಂಗ ನಾಯಕನ ಪರವಾಗಿ ದೇವದುರ್ಗ ತಾಲೂಕಿಗೆ ನೀರು ಬಿಡಿಸುವಂತೆ ಅಧಿಕಾರಿಗಳು ಸ್ಪಂದಿಸಿದ್ದಾರೆ. ಹಾಗೆ ಮರ್ಲಿಂಗ ನಾಯಕನ ಒಂದು ಹೋರಾಟಕ್ಕೆ ಎಲ್ಲರೂ ನಾವು ಬೆಂಬಲ ಕೊಡೋಣ. ಯಾವುದೇ ಕಾರಣಕ್ಕೂ ಮರ್ಲಿಂಗ ನಾಯಕನಂತ ನಾಯಕರು ಸಿಗುವುದಿಲ್ಲ ಎಂದು ಹೇಳಿದರು. ಅಂಗಡಿಗಳಲ್ಲಿ ಏನು ಅವ್ಯವಹಾರ ನಡೀತು, ಅದನ್ನ ಖಂಡಿಸಿ ರೈತರಿಗೆ ನ್ಯಾಯ ಕೊಡಿಸಿ ಆ ಅಂಗಡಿಗಳನ್ನು ಸೀಜ್ ಮಾಡುವಂತ ಕೆಲಸ ಮರ್ಲಿಂಗ ನಾಯಕ ಮಾಡಿದ್ದಾರೆ. ಮರ್ಲಿಂಗ ನಾಯಕನಂತ ಹೋರಾಟಗಾರರು ಹುಟ್ಟೋದಿಲ್ಲ ಎಂದು ಹೇಳಿದರು.

— Ningappa

NATIONAL

ಐಪಿಎಲ್ 2027 ರಿಟೆನ್ಷನ್ ಅಂತಿಮ ದಿನ: 10 ಫ್ರಾಂಚೈಸಿಗಳು ನವೆಂಬರ್ 17ರಂದು ಪಟ್ಟಿಗಳನ್ನು ಸಲ್ಲಿಸಬೇಕು



ಐಪಿಎಲ್ 2027ರ ಆಟಗಾರರ ರಿಟೆನ್ಷನ್‌ಗೆ ಇಂದೇ ಕೊನೆಯ ದಿನ. ಐಪಿಎಲ್ 2027ರ ಮಿನಿ ಹರಾಜಿಗೂ ಮುನ್ನ ಎಲ್ಲಾ 10 ಫ್ರಾಂಚೈಸಿಗಳು ತಾವು ಉಳಿಸಿಕೊಳ್ಳುವ ಮತ್ತು ಬಿಡುಗಡೆ ಮಾಡುವ ಆಟಗಾರರ ಅಂತಿಮ ಪಟ್ಟಿಯನ್ನು ಸಲ್ಲಿಸಲು ಇಂದು (ನವೆಂಬರ್ 17) ಕೊನೆಯ ದಿನವಾಗಿದೆ.

ಈ ದಿನಾಂಕವು ಮಿನಿ ಹರಾಜಿನ ಮುನ್ನದ ಪ್ರಮುಖ ಹಂತವಾಗಿದ್ದು, ತಂಡಗಳು ತಮ್ಮ ಆಟಗಾರರ ಪಟ್ಟಿಯನ್ನು ಅಂತಿಮಗೊಳಿಸುವ ಮೂಲಕ ಮುಂದಿನ ಹರಾಜಿನಲ್ಲಿ ತಮ್ಮ ಸ್ಥಾನವನ್ನು ನಿರ್ಧರಿಸಿಕೊಳ್ಳಬಹುದು.

ಫ್ರಾಂಚೈಸಿಗಳು ತಮ್ಮ ಅನುಭವ ಹೊಂದಿದ ಆಟಗಾರರನ್ನು ಉಳಿಸಿಕೊಳ್ಳುವ ಮತ್ತು ಹೊಸ ಪ್ರತಿಭೆಯನ್ನು ಹುಡುಕುವ ನಡುವಿನ ಸಮತೋಲನವನ್ನು ಸಾಧಿಸಲು ಈ ಪಟ್ಟಿಗಳನ್ನು ಬಳಸುವ ನಿರೀಕ್ಷೆಯಿದೆ, ಇದರಿಂದ ಮುಂದಿನ ಸೀಸನ್‌ನಲ್ಲಿ ತಂಡಗಳ ಸಂಯೋಜನೆ ರೂಪುಗೊಳ್ಳುತ್ತದೆ.

— Ganesh S

SPORTS

ಶಿವಾಲಿಕ್ ಶರ್ಮಾ 101 ರನ್‌ಗಳೊಂದಿಗೆ ಬರೋಡಾ ಮಿಜೋರಾಂ ವಿರುದ್ಧ 8 ವಿಕೆಟ್ ಜಯ



ಬರೋಡಾ ಮತ್ತು ಮಿಜೋರಾಂ ನಡುವೆ ನಿನ್ನೆ ನಡೆಯಿದ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಪಂದ್ಯದಲ್ಲಿ, ಬರೋಡಾ 8 ವಿಕೆಟ್ ವ್ಯತ್ಯಾಸದಿಂದ ಸುಲಭ ಜಯ ಸಾಧಿಸಿದೆ.

ಈ ಪಂದ್ಯದಲ್ಲಿ 101 ರನ್‌ಗಳ ಅತಿದೊಡ್ಡ ಶತಕವನ್ನು ನಿರ್ಮಿಸಿ, ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು.

ಶಿವಾಲಿಕ್ ಶರ್ಮಾ 101 ರನ್‌ಗಳೊಂದಿಗೆ ಮಿತಿಯಿಲ್ಲದ ದಾಳಿಯನ್ನು ನಡೆಸಿ, ಮಿಜೋರಾಂ ಬೌಲಿಂಗ್ ದಾಳಿಯನ್ನು ನಿಭಾಯಿಸಿದರು. ಈ ಶತಕವು ಬರೋಡಾ ತಂಡದ ಒಟ್ಟು ಗುರಿಯನ್ನು ಹೆಚ್ಚಿಸಿ, ಮಿಜೋರಾಂ ವಿರುದ್ಧದ ಜಯವನ್ನು ಖಚಿತಪಡಿಸಿತು.

ಮೈದಾನದಲ್ಲಿ ಮಿಜೋರಾಂ ತಂಡವು ಪ್ರಾರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದರೂ, ಬರೋಡಾ ಬ್ಯಾಟಿಂಗ್‌ದ ಪ್ರಬಲ ಪ್ರದರ್ಶನ ಮತ್ತು ವಿಶೇಷವಾಗಿ ಶರ್ಮಾ ಅವರ ಶತಕದಿಂದ ಪಂದ್ಯವನ್ನು ತಮ್ಮ ಹಕ್ಕಿಗೆ ತಿರುಗಿಸಿತು.

ಈ ಜಯದಿಂದ ಬರೋಡಾ ತಂಡವು ಟೂರ್ನಮೆಂಟ್‌ನಲ್ಲಿ ಉತ್ತಮ ಸ್ಥಾನವನ್ನು ಪಡೆಯುವ ನಿರೀಕ್ಷೆ ಇದೆ, ಮತ್ತು ಶಿವಾಲಿಕ್ ಶರ್ಮಾ ಅವರ ಶತಕವು ಅವರ ವ್ಯಕ್ತಿಗತ ಸಾಧನೆಯಲ್ಲಿ ಹೊಸ ಮೈಲುಗಲ್ಲು ಆಗಿದೆ.

— Ganesh S

SPORTS

ILT20 ಸೀಸನ್ 5ಕ್ಕೆ ಆಂಡ್ರೆ ರಸೆಲ್, ಕೀರನ್ ಪೊಲಾರ್ಡ್, ಸ್ಯಾಮ್ ಬಿಲ್ಲಿಂಗ್ಸ್ ಮತ್ತು ಸ್ಯಾಮ್ ಕರನ್ 6 ವೈಲ್ಡ್‌ಕಾರ್ಡ್ ಆಯ್ಕೆಯಾಯಿತು



ಇಂಟರ್‌ನ್ಯಾಷನಲ್ ಲೀಗ್ ಟಿ20 (ILT20) 5ನೇ ಸೀಸನ್‌ಗೆ ನಾಲ್ಕು ಹೊಸ ವೈಲ್ಡ್‌ಕಾರ್ಡ್ ಆಟಗಾರರನ್ನು ಘೋಷಿಸಲಾಗಿದೆ. ಆಯ್ಕೆಯಾದವರು ಆಂಡ್ರೆ ರಸೆಲ್, ಕೀರನ್ ಪೊಲಾರ್ಡ್, ಸ್ಯಾಮ್ ಬಿಲ್ಲಿಂಗ್ಸ್ ಮತ್ತು ಸ್ಯಾಮ್ ಕರನ್ 6 ಆಗಿದ್ದಾರೆ.

ಈ ಆಯ್ಕೆ ತಂಡಗಳ ಕ್ವಾಟ್‌ಗಳ ಪೂರೈಕೆ ಮತ್ತು ಆಟಗಾರರ ಪ್ರಭಾವವನ್ನು ಹೆಚ್ಚಿಸುವ ಉದ್ದೇಶದಿಂದ ಮಾಡಲಾಗಿದೆ. ರಸೆಲ್ ಮತ್ತು ಬಿಲ್ಲಿಂಗ್ಸ್‌ಗಳಂತಹ ಅನುಭವೀ ಆಟಗಾರರು ಟೂರ್ನಮೆಂಟ್‌ಗೆ ಹೆಚ್ಚುವರಿ ಸ್ಪರ್ಧಾತ್ಮಕತೆಯನ್ನು ತರಲಿದ್ದಾರೆ.

ಕೀರನ್ ಪೊಲಾರ್ಡ್ ಮತ್ತು ಸ್ಯಾಮ್ ಕರನ್ 6 ಹೊಸ ಮುಖಗಳಾಗಿ ತಂಡಗಳಿಗೆ ತಾಜಾ ಶಕ್ತಿ ಮತ್ತು ಕೌಶಲ್ಯವನ್ನು ನೀಡುವ ನಿರೀಕ್ಷೆ ಇದೆ. ಆಯ್ಕೆಯ ವಿವರಗಳು ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ILT20 ಆಯೋಜಕರು ಈ ಆಯ್ಕೆ ಮೂಲಕ ಟೂರ್ನಮೆಂಟ್‌ನ ಗುಣಮಟ್ಟ ಮತ್ತು ಪ್ರೇಕ್ಷಕರ ಆಸಕ್ತಿಯನ್ನು ಹೆಚ್ಚಿಸುವುದನ್ನು ಉದ್ದೇಶಿಸಿದ್ದಾರೆ.

— Ganesh S